ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at GPO-MBC Bengaluru Post Office 560001,
Posting Day 12th. Registered No. RNP/BGS/2094/2011-13
RNI No. KARBIL - 2004/18001

## ಸಂಯುಕ್ತ ಸಹಕಾರಿಯ ನಿರ್ದೇಶಕರ ಪರಿಚಯ





## ಸೌಮ್ಯ ಸ್ವಭಾವದ ಸೃಜನಶೀಲ ವೈ.ಟಿ.ಪಾಟೀಲ

ಪ್ರಸ್ತುತ ಯಾದಗಿರಿ ಜಿಲ್ಲೆಯ ಸಂಯುಕ್ತ ಸಹಕಾರಿಯ ಪ್ರತಿನಿಧಿಯಾದ ಶ್ರೀ ಯಮನಪ್ಪ ತಮ್ಮನ ಗೌಡ ಪಾಟೀಲರವರು ಕೆಂಭಾವಿಯ ಕಾಮಧೇನು ಸೌಹಾರ್ದ ಸಹಕಾರಿಯ ಅಧ್ಯಕ್ಷರು. ಸಹಕಾರಿ ಕ್ಷೇತ್ರದ ಮೂಲಕ ಸಮಾಜದ ಅತ್ಯಂತ ಕಡೆಯ ವ್ಯಕ್ತಿಗೆ ನೆರವಾಗಲು ಸಾಧ್ಯವೆಂಬ ಸತ್ಯವನ್ನು ಅರಿತ ನಂತರ ಸಹಕಾರಿ ಕ್ಷೇತ್ರದ ಸಂಪೂರ್ಣ ಮಾಹಿತಿ ಪಡೆಯುವುದಕ್ಕಾಗಿ ಮೈಸೂರಿನಲ್ಲಿ ನಡೆದ 10ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಹಕಾರಿ ಆಡಳಿತ, ಸಹಕಾರಿ ತತ್ವಗಳು, ಸಹಕಾರಿ ಲೆಕ್ಕಪತ್ರಗಳು, ಸಹಕಾರಿ ಪರಿಸರ ಮುಂತಾದ ವಿಷಯಗಳನ್ನು ತಿಳಿದುಕೊಂಡು ಕಾಮಧೇನು ಸೌಹಾರ್ದ ಸಹಕಾರಿಯನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ.

ಕೃಷಿ ಕುಟುಂಬದಲ್ಲಿ 1948ರಲ್ಲಿ ಜನಿಸಿದ ಬಿಎಸ್ಸಿ ಪದವಿಧರರಾದ ಶ್ರೀಯುತರು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳದ ನಿವೃತ್ತ ಅಧಿಕಾರಿ. ಮಾರಾಟ ಮಹಾಮಂಡಳದಲ್ಲಿ ಉತ್ತಮ ಸೇವೆ ಸಲ್ಲಿಸಿ ಅಲ್ಲಿನ ಅಧಿಕಾರಿಗಳಿಂದ ಪ್ರಶಂಸೆ ಗೊಳಗಾದವರು. ಶ್ರೀಯುತ ಪಾಟೀಲರು ಸಹಕಾರ ಕ್ಷೇತ್ರದಲ್ಲಿ ಸುರಪೂರ ತಾಲ್ಲೂಕ ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘ ಸುರಪೂರದಲ್ಲಿ ನಿರ್ದೇಶಕರಾಗಿ, ಕೆಂಭಾವಿ ಕೃಷಿ ಪತ್ತಿನ ಪ್ರಾಥಮಿಕ ಸಹಕಾರ ಸಂಘದ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಹಕಾರ ಕ್ಷೇತ್ರವನ್ನು ಹೊರತುಪಡಿಸಿ ಶಿಕ್ಷಣ ಕ್ಷೇತ್ರದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಶ್ರೀ ಮಹಾ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಗ್ರಾಮೀಣಾಭಿವೃದ್ಧಿ ಹಾಗೂ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ಶ್ರೀ ಮಹಾ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಪ್ರೌಢಶಾಲೆ (ಆಂಗ್ಲ ಮಾಧ್ಯಮ) ಇದರ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

# ಸೌಹಾರ್ದ ಸಹಕಾರಿ ನಿರ್ದೇಶಕರುಗಳಿಗಾಗಿ ಉನ್ನತ ಮಟ್ಟದ ತರಬೇತಿ ಕಾರ್ಯಕ್ರಮ

ರಾಜ್ಯದ ಸೌಹಾರ್ದ ಸಹಕಾರಿ ನಿರ್ದೇಶಕರುಗಳಿಗಾಗಿ 2 ದಿನಗಳ ಉನ್ನತ ಮಟ್ಟದ ತರಬೇತಿಯ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ದಿನಾಂಕ 17 ಹಾಗೂ 18 ಆಗಸ್ಟ್ 2012ರಂದು ನಡೆಸಲು ಉದ್ದೇಶಿಸಲಾಗಿದೆ. ಸೌಹಾರ್ದ ಸಹಕಾರಿ ಸಂಸ್ಥೆಗಳು ವೇಗವಾಗಿ ಬೆಳೆಯಲು, ನೀವೊಬ್ಬ ಉತ್ತಮ ಅಧ್ಯಕ್ಷರಾಗಲು ಒಬ್ಬ ಉತ್ತಮ ನಿರ್ದೇಶಕರಾಗಲು ಈ



ತರಬೇತಿ ಪ್ರಯೋಜನಕಾರಿಯಾಗಿದೆ.

ಕಾರ್ಯಕ್ರಮದಲ್ಲಿ 60 ಜನರಿಗೆ ಮಾತ್ರ ಪ್ರವೇಶ ಸೀಮಿತವಾಗಿದೆ. ಪ್ರವೇಶ ಶುಲ್ಕ ತಲಾ ರೂ.1,000/– ಕಾರ್ಯಕ್ರಮದ ಅವಧಿ 2 ದಿನಗಳು ಭಾಗವಹಿಸುವ ಪ್ರತಿನಿಧಿಗಳ ಹೆಸರನ್ನು ನೋಂದಾಯಿಸಲು 04.08.2012 ಕೊನೆಯ ದಿನಾಂಕ ವಾಗಿರುತ್ತದೆ.

**LEADER OF LEADERS - KARNATAKA STATE SOUHARDA FEDERAL CO-OP-LTD BANGALORE**

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತೀಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜಿ. ಕಾರಕೂನ | 9482734077 |
| ಕಾನೂನು ವಿಭಾಗದ ಅಧಿಕಾರಿ | ಶ್ರೀ ಶ್ರೀಕಾಂತ | 9916814888 |
| ಬೆಂಗಳೂರು ವಿಭಾಗಾಧಿಕಾರಿ | ಶ್ರೀ ರಘುನಂದನ್ ಕೆ. | 9481036592 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ತೋಪಣ್ಣನವರ್ | 9916367887 |
| ಗುಲ್ಬರ್ಗಾ ವಿಭಾಗಾಧಿಕಾರಿ | ಶ್ರೀ ಸಂಜಯ ಕೋರಟಕರ | 9900990268 |
| ಮೈಸೂರು ವಿಭಾಗಾಧಿಕಾರಿ | ಶ್ರೀ ಶಿವಕುಮಾರ ಬಿರಾದಾರ | 9844454995 |

ಇವರಿಂದ ಪ್ರಕಟಿತ :

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 10.
web : www.souharda.coop,
E-mail : souharada@souharada.coop,
ದೂ.ಸಂ : 23378375/76/77/78/79/80 & 23474408, 23573291
ಸಂಪಾದಕ, ಪ್ರಕಾಶಕ : **ಶರಣಗೌಡ ಜಿ. ಪಾಟೀಲ**
ಸಂಚಿಕೆ ಸಿದ್ಧತೆ : **ವಿ.ಜಿ.ಕಾರಕೂನ**
ಮುದ್ರಣ : **ವರ್ಣ ಕಮ್ಯುನಿಕೇಷನ್ಸ್**, ಬೆಂಗಳೂರು.

**ಬೆಳಗಾವಿ ವಿಭಾಗೀಯ ಕಛೇರಿ ವಿಳಾಸ :** ನಂ. 436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ – 1, ದೂ. 0831–2401551
**ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ :** ನಂ. ಡಿ–02, 1ನೇ ಮಹಡಿ, ಶ್ರೀ ಗಜಾನನ ಫ್ಲಾವರ್ ವ್ಯಾಲಿ, ಗುಡ್–ಲಕ್ ಹೋಟೆಲ್ ಎದುರು, ಖೂಬಾ ಪ್ಲಾಟ್, ಗುಲಬರ್ಗಾ– 585103. ದೂ;08472–270222, ಮೊ : 9900990268

ಜುಲೈ – 2012

ಅಂತರರಾಷ್ಟ್ರೀಯ
ಸಹಕಾರಿ ವರ್ಷ – 2012

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸಂಪುಟ 10 * ಸಂಚಿಕೆ 07 * ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ * ವಾರ್ಷಿಕ ಚಂದಾ 100/– * ಬೆಲೆ ರೂ. 12/–

## ರಾಜ್ಯದ ನೂತನ ಮುಖ್ಯಮಂತ್ರಿ ಮಾನ್ಯ ಶ್ರೀ ಜಗದೀಶ್ ಶೆಟ್ಟರ್ ಹಾಗೂ ಅವರ ಮಂತ್ರಿ ಮಂಡಲದ ಸಚಿವರಿಗೆ ಅಭಿನಂದನೆಗಳು



ಸನ್ಮಾನ್ಯ ಶ್ರೀ ಜಗದೀಶ್ ಶೆಟ್ಟರ್



ಶ್ರೀ ಕೆ.ಎಸ್. ಈಶ್ವರಪ್ಪ



ಶ್ರೀ ಆರ್. ಅಶೋಕ್

ಒಳಪುಟಗಳಲ್ಲಿ...

ಅಧ್ಯಕ್ಷರ ನುಡಿ .......... 2
ಮಾಹಿತಿ .......... 4
ಸಂಯುಕ್ತ ಸಹಕಾರಿ ಸಮಾಚಾರಗಳು........ 3,6,7,8,9,12
ಶಿಬಿರಾರ್ಥಿಗಳ ಅನಿಸಿಕೆಗಳು..........10,11
ಲೇಖನಗಳು .......... 4,13,15,17,18
ಪತ್ರಿಕೆ ಕುರಿತ ಅನಿಸಿಕೆಗಳು .......... 16
ಸುದ್ದಿ, ಷೇರು ಚೂರು–ಪಾರು .......... 19

ಸೌಹಾರ್ದ ಸಹಕಾರಿಗಳ ಸಂಖ್ಯೆ : 2125 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 456



ಸಹಕಾರಿ ಕ್ಷೇತ್ರದ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಶೇಷವಾಗಿ ಯುವ ಸಹಕಾರಿ ಮುಖಂಡರು ತಾವು ನಾಯಕತ್ವ ವಹಿಸಿರುವ ಸಹಕಾರಿ ಸಂಸ್ಥೆಗಳ ಬಗ್ಗೆ ಕೆಲವು ವಿಷಯಗಳನ್ನು ಹಂಚಿಕೊಳ್ಳುವ ಅಪೇಕ್ಷೆ ನನ್ನದು.

# ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಜವಾಬ್ದಾರಿಯುತ ನಾಯಕತ್ವ

**ನೂತನ** ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವ ಮಾನ್ಯ ಶ್ರೀ ಜಗದೀಶ್‌ಶೆಟ್ಟರ್ ಅವರ ಮಂತ್ರಿ ಮಂಡಲದ ಸದಸ್ಯರಿಗೆ ಹಾರ್ದಿಕ ಅಭಿನಂದನೆಗಳು.

ನಮ್ಮ ದೇಶದ ಸಹಕಾರಿ ಚಳುವಳಿಗೆ ಒಂದು ಶತಮಾನದ ಇತಿಹಾಸವಿರುವುದು ತಮಗೆಲ್ಲ ತಿಳಿದಿದೆ. ಸಮಾಜದ ಅಭಿವೃದ್ಧಿಯ ಬಗ್ಗೆ ಕಳಕಳಿಯಿದ್ದ ನಮ್ಮ ಹಿರಿಯರು ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ನಮಗೆ ರಾಜಕೀಯ ಸ್ವಾತಂತ್ರ ತಂದುಕೊಟ್ಟರು. ಅದೇ ರೀತಿ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಸಹಕಾರ ಸಂಸ್ಥೆಗಳನ್ನು ಹುಟ್ಟುಹಾಕಿ ಅತ್ಯಂತ ಪ್ರಾಮಾಣಿಕ ಹಾಗೂ ನಿಸ್ವಾರ್ಥ ಸೇವೆಯಿಂದ ಜನಸೇವೆಯೇ ಜನಾರ್ಧನ ಸೇವೆಯೆಂದು ಕಾರ್ಯನಿರ್ವಹಿಸಿ ಈ ದೇಶದ ಸಹಕಾರಿ ಕ್ಷೇತ್ರದ ಸಾಧನೆಯನ್ನು ಪ್ರಪಂಚದಾದ್ಯಂತ ಹರಡಿಸಿದ ಕೀರ್ತಿ ನಮ್ಮ ಹಿರಿಯರದು. ಅದು ಉತ್ತಮ ಹಾಗೂ ಜವಾಬ್ದಾರಿ ನಾಯಕತ್ವವೆನಿಸುತ್ತದೆ. ಈ ಸಾಲಿನಲ್ಲಿ ದಿ.ವೈಕುಂಠಲಾಲ ಮೆಹತಾ, ಡಾ॥ ಕುರಿಯನ್ ಕರ್ನಾಟಕದವರಾದ ದಿ. ಸಣ್ಣರಾಮನಗೌಡ ಸಿದ್ದನಗೌಡ ಪಾಟೀಲ, ದಿ. ಕೆ.ಹೆಚ್ ಪಾಟೀಲ, ದಿ. ಮೊಳಹಳ್ಳಿ ಶಿವರಾಯರು, ದಿ. ಶ್ರೀಪಾದ ಹೆಗಡೆ ಕಡವೆ, ದಿ. ಕೆ.ವಿ.ಶಂಕರಗೌಡ, ದಿ. ಕೆಂಪಿರೇಗೌಡ, ದಿ. ಎ.ಎಸ್.ಪಾಟೀಲ, ದಿ. ಕೃಷ್ಣಪ್ಪ. ದಿ. ಪಂಡಿತ, ದಿ. ಜಿ.ಎಸ್.ಆಚಾರ, ದಿ. ವೀರಶೆಟ್ಟಿ ಕುಶನೂರ ದಿ. ಕೇಶವಮೂರ್ತಿ ಸೇರಿದಂತೆ ಇನ್ನೂ ಅನೇಕರು ಸಹಕಾರ ಕ್ಷೇತ್ರದ ಅಗ್ರಗಣ್ಯ ನಾಯಕರೆನಿಸಿಕೊಂಡಿದ್ದಾರೆ.

ಜಗತ್ತಿನ ಅತ್ಯಂತ ದೊಡ್ಡ ಸಹಕಾರಿ ಕ್ಷೇತ್ರ ನಮ್ಮ ದೇಶದ್ದು. ನಮ್ಮ ದೇಶದ ಸಹಕಾರಿ ಕ್ಷೇತ್ರದ ಸಾಧನೆ ಅದ್ವಿತೀಯ. ಹಸಿರು ಕ್ರಾಂತಿಯ ಮೂಲಕ ಈ ದೇಶದ ಆಹಾರ ಕೊರತೆಯನ್ನು ನೀಗಿಸಿದ ಹೆಗ್ಗಳಿಕೆ ನಮ್ಮದು. ಕ್ಷೀರ ಕ್ರಾಂತಿಯ ಮೂಲಕ ದೇಶದಲ್ಲಿ ಹಾಲಿನ ಹೊಳೆ ಹರಿಸಿದ ರೈತರಿಗೆ ಕೃಷಿಯ ಜೊತೆಗೆ ಪೂರಕ ಉದ್ದಿಮೆಯನ್ನು ಒದಗಿಸಿ ಅವರನ್ನು ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಗೆ ಕೊಂಡೊಯ್ದ ಖ್ಯಾತಿ ನಮ್ಮದು. ಪಟ್ಟಣ ಪ್ರದೇಶದ ಬಡಜನರಿಗೆ ಸ್ವ-ಉದ್ಯೋಗಕ್ಕೆ ನೆರವು ನೀಡಿ ಆರ್ಥಿಕ ಅಭಿವೃದ್ಧಿಗೆ ಶ್ರಮಿಸುತ್ತಿರುವ ಖ್ಯಾತಿ ನಮ್ಮದು. ಇಂತಹ ಸಾಧನೆ ಮಾಡಿರುವ ಉತ್ತಮ ಆರ್ಥಿಕ ವ್ಯವಸ್ಥೆಯಾಗಿ ಹೊರಹೊಮ್ಮಿದ ಈ ಸಹಕಾರ ಕ್ಷೇತ್ರ ಜವಾಬ್ದಾರಿಯುತ ನಾಯಕತ್ವದ ಕೊರತೆ ಎದುರಿಸುತ್ತಿರುವುದು ವಿಷಾದಕರ ಸಂಗತಿ.

ಆದ್ದರಿಂದ ಸಹಕಾರಿ ಕ್ಷೇತ್ರದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಶೇಷವಾಗಿ ಯುವ ಸಹಕಾರಿ ಮುಖಂಡರು ತಾವು ನಾಯಕತ್ವ ವಹಿಸಿರುವ ಸಹಕಾರಿ ಸಂಸ್ಥೆಗಳ ಅಭಿವೃದ್ಧಿ ಬಗ್ಗೆ ಕೆಲವು ವಿಷಯಗಳನ್ನು ಹಂಚಿಕೊಳ್ಳುವ ಅಪೇಕ್ಷೆ ನನ್ನದು. ಈ ಸಲುವಾಗಿ ನಿಮ್ಮೊಡನೆ ಈ ಮಾತುಗಳು.

ಸಹಕಾರಿ ಸಂಸ್ಥೆಯ ಧ್ಯೇಯೊದ್ದೇಶಗಳನ್ನು ಅರ್ಥಮಾಡಿಕೊಳ್ಳಬೇಕು. ಒಂದು ಸಂಸ್ಥೆಯ ಅಧ್ಯಕ್ಷರು ಆ ಸಂಸ್ಥೆಯ ಯಜಮಾನರಂತೆ ಜವಾಬ್ದಾರಿ ಕಾರ್ಯನಿರ್ವಹಣೆ ಮಾಡಬೇಕಾಗುತ್ತದೆ. ಸಹಕಾರಿ ಆಡಳಿತ ವ್ಯವಸ್ಥೆಯಲ್ಲಿ ತಮ್ಮ ಪಾತ್ರದ ವ್ಯಾಪ್ತಿಯನ್ನು ಅರ್ಥಮಾಡಿಕೊಂಡು ಕಾರ್ಯನಿರ್ವಹಿಸುವುದು ಅವಶ್ಯಕ. ಸಹಕಾರಿ ಕಾನೂನಿನ ಜೊತೆಗೆ ಈ ಕ್ಷೇತ್ರಕ್ಕೆ ಅನ್ವಯಿಸಬಹುದಾದ ಇತರೆ ಕಾನೂನುಗಳ ಬಗ್ಗೆ ಮಾಹಿತಿ, ಸಹಕಾರಿ ಇಲಾಖೆ ಹಾಗೂ ಕಾನೂನಿನೊಂದಿಗೆ ಇತರೆ ಸಹಕಾರಿ ಸಂಸ್ಥೆಗಳ ಜೊತೆಗೆ ಉತ್ತಮ ಬಾಂಧವ್ಯ ಹೊಂದುವುದು ಅಗತ್ಯ. ಜೊತೆಗೆ ಸಾರ್ವಜನಿಕ ಸಂಪರ್ಕ ಮತ್ತು ಸಂಸ್ಥೆಯ ಸಿಬ್ಬಂದಿಯವರ ವಿಶ್ವಾಸವನ್ನು ಹೊಂದುವುದು ಅವಶ್ಯಕ. ಉತ್ತಮ ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆ ಅಧ್ಯಯನಕ್ಕಾಗಿ ಅಧ್ಯಯನ ಪ್ರವಾಸ, ನಿರಂತರ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡು ತಮ್ಮ ಜ್ಞಾನದ ಮಟ್ಟವನ್ನು ವೃದ್ಧಿಸಿಕೊಳ್ಳುವುದರ ಜೊತೆಗೆ ಉತ್ತಮ ಅನುಭವವನ್ನು ಪಡೆದುಕೊಂಡು ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುವುದು ಇಂದಿನ ಅಗತ್ಯತೆ ಎಂದು ಭಾವಿಸುತ್ತೇನೆ.

ಶ್ರಾವಣ ಮಾಸದ ವರಮಹಾಲಕ್ಷ್ಮಿ ಹಬ್ಬದ ಹಾರ್ದಿಕ ಶುಭಾಶಯಗಳು.

**– ಎಸ್.ಆರ್. ಸತೀಶಚಂದ್ರ**
ಅಧ್ಯಕ್ಷರು.

# ಗ್ರಾಹಕರಿಗೆ ಹೆಚ್ಚಿನ ಸೇವೆ



ಇತ್ತೀಚಿನ ದಿನಗಳಲ್ಲಿ ಬ್ಯಾಂಕುಗಳು ಹೆಚ್ಚೆಚ್ಚು ಗ್ರಾಹಕಸ್ನೇಹಿ ಸೇವೆ ನೀಡಲು ಮುಂದಾಗುತ್ತಿವೆ. ರಾಷ್ಟ್ರದ ಬ್ಯಾಂಕಿಂಗ್ ಸೇವೆಯಲ್ಲಿ ಮುಂಚೂಣಿಯಲ್ಲಿರುವ ಎಸ್.ಬಿ.ಐ ಈ ತಿಂಗಳಲ್ಲಿ ಇಂತಹ ಎರಡು ಯೋಜನೆಗಳನ್ನು ಪ್ರಕಟಿಸಿದೆ. ತನ್ನ ಗ್ರಾಹಕರಿಗೆ ಬ್ಯಾಂಕ್ ಮೂಲಕ ಆದಾಯ ತೆರಿಗೆ ವಿವರ ಸಲಿಕೆಗೆ ಅವಕಾಶ ಕಲ್ಪಿಸಿದೆ. ಈ ಮೂಲಕ ಬ್ಯಾಂಕ್ ಖಾತೆದಾರರು ಅಲ್ಪ ಶುಲ್ಕದೊಂದಿಗೆ ತಮ್ಮ ತೆರಿಗೆ ವಿವರ ಸಲ್ಲಿಸಬಹುದು.

ಇದಲ್ಲದೆ ಗ್ರಾಹಕರು ಶೂನ್ಯ ಮೊತ್ತದ ಉಳಿತಾಯ ಖಾತೆಯನ್ನು ಬ್ಯಾಂಕಿನಲ್ಲಿ ಹೊಂದಬಹುದಾಗಿದೆ. ಈ ಮುನ್ನ ಉಳಿತಾಯ ಖಾತೆಯ ಚೆಕ್ ಬುಕ್ ಹೊಂದಲು ರೂ. 500, ರೂ. 1000 ಮೊತ್ತ ಉಳಿಸಬೇಕಾಗಿತ್ತು, ಇಲ್ಲವಾದಲ್ಲಿ ಮೂರು ತಿಂಗಳಿಗೊಮ್ಮೆ ರೂ. 250 ದಂಡ ವಿಧಿಸಲಾಗುತ್ತಿತ್ತು. ಈಗ ಆ ಭಯವಿಲ್ಲದೆ ಉಳಿತಾಯ ಖಾತೆಗಳನ್ನು ಹೊಂದಬಹುದಾಗಿದೆ. ಇದರಿಂದಾಗಿ ಮುಂದಿನ ದಿನಗಳಲ್ಲಿ ಉಳಿತಾಯ ಖಾತೆದಾರರ ಸಂಖ್ಯೆ ಹೆಚ್ಚಾಗಲಿದೆ ಎನ್ನುವ ನಿರೀಕ್ಷೆ ಇದೆ.

# ನಂಬಿದ 'ಜಾಕಿ' ರೂ. ಕೈ ಬಿಡಲಿಲ್ಲ



ಕುದುರೆ ರೇಸ್‌ನಲ್ಲಿ ತನ್ನ ನೆಚ್ಚಿನ ಕುದುರೆ ಮೇಲೆ ಹಣ ಕಟ್ಟುವ ಮುನ್ನ ಬಾಜಿದಾರ ಅದರ ಜಾಕಿಯಾರು ಎಂದು ವಿಚಾರಿಸುತ್ತಾನೆ. ಕುದುರೆ ಎಷ್ಟೇ ಸಮರ್ಥವಾಗಿದ್ದರೂ ಜಾಕಿ ಯಾರು, ಅವನು ಲಗಾಮು ಬಿಗಿ ಹಿಡಿಯುತ್ತಾನಾ ಅಥವಾ ಸಡಲಿಸಿ ಚಾಟಿ ಝಳಪಿ ವೇಗವಾಗಿ ಗುರಿ ಮುಟ್ಟುತ್ತಾನಾ ಎನ್ನುವುದು ಮುಖ್ಯ. ರೂ. ಎನ್ನುವ ಕುದುರೆಯನ್ನು ಇಷ್ಟು ದಿನ ಚೆನ್ನಾಗಿಯೇ ಸವಾರಿಮಾಡಿ ಹಲವಾರು ಬೆಟ್ಟಗುಡ್ಡಕಾಡು ಕಣಿವೆ ದಾಟಿಸಿದ್ದ 'ದಾದಾ' ಪ್ರಣವ್ ಮುಖರ್ಜಿ ಈಗ ರೂ. ಕುದುರೆ ಇಳಿದು ರಾಷ್ಟ್ರಪತಿ ಭವನದದತ್ತ ಸಾಗಿದ್ದಾರೆ.

ಪ್ರಣವ್ ಎಂಬ ಜಾಕಿ ಮೇಲೆ ಹೂಡಿಕೆದಾರರಿಗೆ ಎಷ್ಟೇ ವಿಶ್ವಾಸವಿದ್ದರೂ, ಅವರ ಲಗಾಮು ಬಿಗಿ ಎಂದೇ ಭಾವನೆ ಅಲ್ಲದೆ ಇತ್ತೀಚಿನ ದಿನಗಳಲ್ಲಿ ಈ ಜಾಕಿ 'ಗಾರ್' (ಜನರಲ್ ಆ್ಯಂಟಿ ಟ್ಯಾಕ್ಸ್ ಅವೈಡೆನ್ಸ್ ರೂಲ್ಸ್) ಲಗಾಮು ಹಿಡಿದೆಳೆಯ ಬಹುದೆಂಬ ಭಯದಿಂದ ವಿದೇಶಿ ಹೂಡಿಕೆದಾರರು ರೂ. ಕುದುರೆಯ ಬಿಟ್ಟು ಡಾಲರ್ ಕುದುರೆಯ ಮೇಲೆ ಹಣ ಕಟ್ಟತೊಡಗಿದರು. ಇದರಿಂದ ರೇಸ್‌ನಲ್ಲಿ ರೂ. ಹಿಂದೆ ಬೀಳತೊಡಗಿತು. ಈಗ ರೂ. ಕುದುರೆಯ ಹಳೇ 'ಜಾಕಿ' ಮನಮೋಹನ್ ಸಿಂಗ್ ಏರಿದ್ದೇ ತಡ ರೂ. ಹಂತ ಹಂತವಾಗಿ ಡಾಲರ್‌ನೊಂದಿಗಿನ ಅಂತರ ಕಡಿಮೆ ಆಗತೊಡಗಿದೆ. ಇದಕ್ಕೆ ಕಾರಣ ಈ ಜಾಕಿ ಗಾರ್ ಲಗಾಮು ಹಾಕುವುದಿಲ್ಲ ಎಂಬ ನಂಬಿಕೆಯಿಂದ ಷೇರು ಪೇಟೆಯಲ್ಲಿ ಹೂಡಿಕೆದಾರರಿಗೆ ರೂ. ಮೇಲಿನ ಭರವಸೆ ಹೆಚ್ಚುತ್ತಿದೆ ! ರೂ. ಬೆಲೆ ಏರುತ್ತಿದೆ. ಈಗಾಗಲೇ 34 ಬಿಲಿಯನ್ ಡಾಲರ್‌ಗೂ ಹೆಚ್ಚಿನ ಷೇರು ಪೇಟೆಯತ್ತ ಹರಿದು ಬಂದಿದ್ದರೆ, ಮುಂದಿನ ದಿನಗಳಲ್ಲಿ ಇದು ಇನ್ನೂ ಶೇ. 20 ರಿಂದ 25 ರಷ್ಟು ಹೆಚ್ಚುವ ಸಂಭವವಿದೆ.

# ಚೂರುಪಾರು ಹೂಡಿಕೆಗೆ ರಾಜೀವ್‌ಗಾಂಧಿ ಷೇರು

ಷೇರು ಪೇಟೆಯಲ್ಲಿ ವ್ಯವಹರಿಸಲು ಅಪಾರ ಹಣ ಬೇಕೆನ್ನುವುದು ಜನಸಾಮಾನ್ಯರ ನಂಬಿಕೆ. ಅದಕ್ಕಾಗಿ ಇವರು ಷೇರು ವ್ಯವಹಾರದಿಂದ ದೂರ ಉಳಿಯುತ್ತಾರೆ.

ಇಂತವರಿಗಾಗಿಯೇ ಕೇಂದ್ರ ಹಣಕಾಸು ಸಚಿವಾಲಯ ರಾಜೀವ್ ಗಾಂಧಿ ಷೇರು ಯೋಜನೆ ಜಾರಿಗೆ ತರಲು ಸಿದ್ಧತೆ ನಡೆಸಿದೆ. ಈ ತಿಂಗಳ ಕೊನೆ ವೇಳೆಗೆ ಈ ಕುರಿತ ಪ್ರಕಟಣೆಯಾಗಲಿದೆ. ಇದು ಜಾರಿಯಾದರೆ ಸಣ್ಣಪುಟ್ಟ ಹೂಡಿಕೆದಾರರು ಈ ಯೋಜನೆಯ ಷೇರಿನಲ್ಲಿ ಹಣ ಹೂಡಬಹುದು. ಇದನ್ನು ತೆರಿಗೆ ಉಳಿತಾಯ ಯೋಜನೆಗಾಗಿ ಜಾರಿಗೊಳಿಸುವಂತೆ ಸೆಬಿ ಕೇಂದ್ರ ಸಚಿವಾಲಯಕ್ಕೆ ವಿನಂತಿಸಿದೆ. ಇದರೊಂದಿಗೆ ಹೂಡಿಕೆ ಕಾಲಮಿತಿಯನ್ನು ಒಂದು ವರ್ಷಕ್ಕೆ ನಿಗದಿಗೊಳಿಸಿದಲ್ಲಿ, ಹೆಚ್ಚು ಹೆಚ್ಚು ಜನಸಾಮಾನ್ಯರು, ವೇತನದಾರರು ಷೇರು ಯೋಜನೆಯಲ್ಲಿ ತಮ್ಮ ಉಳಿತಾಯವನ್ನು ತೊಡಗಿಸಬಹುದು ಹಾಗೂ ತೆರಿಗೆ ರಿಯಾಯಿತಿ ಪಡೆಯಬಹುದು.

# 30 ಸಾವಿರದ ಗಡಿ ದಾಟಿದ ಬಂಗಾರ



ವಿಶ್ವದೆಲ್ಲೆಡೆ ಉಂಟಾಗಿರುವ ಆರ್ಥಿಕ ಹಿಂಜರಿತದಿಂದಾಗಿ ಚಿನ್ನದ ಮೇಲಿನ ಹೂಡಿಕೆ ಹೆಚ್ಚಾಗಿದೆ. ಇದರಿಂದ ಭಾರತದಲ್ಲಿ ಚಿನ್ನದ ಬೆಲೆ 10 ಗ್ರಾಂ.ಗೆ ರೂ. 30 ಸಾವಿರದ ಗಡಿ ದಾಟಿದೆ. ಕೆಲ ದಿನಗಳಲ್ಲಿ ಆಷಾಡ ಕಳೆದು ಶ್ರಾವಣದ ಶುಭದಿನಗಳು ಆರಂಭವಾಗಲಿರುವ ಹಿನ್ನೆಲೆಯಲ್ಲಿ ಮದುವೆ ಹಾಗು ಶುಭಕಾರ್ಯಗಳಿಗೆ ಚಿನ್ನದ ಖರೀದಿ ಹೆಚ್ಚಾಗಲಿರುವುದರಿಂದ ಬೇಡಿಕೆ ಹೆಚ್ಚಲಿದೆ. ಈಗಾಗಲೇ ಕಳೆದ ವರ್ಷಕ್ಕಿಂತಲೂ ಈ ಭಾರಿ ಚಿನ್ನದ ಆಮದು 1037 ಟನ್‌ನಿಂದ 1337 ಟನ್‌ಗೆ ಹೆಚ್ಚಳವಾಗಿದೆ. ಜಗತ್ತಿನಲ್ಲೇ ಅತಿ ಹೆಚ್ಚು ಭಾರತದಲ್ಲಿ ಚಿನ್ನಕ್ಕೆ ಅಪಾರ ಬೇಡಿಕೆ ಇದೆ.



# ಕಳ್ಳನಾಣ್ಯ ಸಲುಗೆಗೆ ಸಲ್ಲದು

ಎಚ್. ಶಿವಕುಮಾರ್, ಚಾರ್ಟೆರ್ಡ್ ಅಕೌಂಟೆಂಟ್

2012ರ ಕೇಂದ್ರ ಬಜೆಟ್ಟನ್ನು ಸಂಸತ್ತಿನಲ್ಲಿ ಮಂಡಿಸುವ ಸಂದರ್ಭದಲ್ಲಿ ಕಾಳಧನದ ಮೇಲೊಂದು ಶ್ವೇತಪತ್ರವನ್ನು ಪ್ರಕಟಿಸುವುದಾಗಿ ಹಣಕಾಸು ಸಚಿವ ಪ್ರಣಬ್ ಮುಖರ್ಜಿ ಹೇಳಿದ್ದರು. ನಮ್ಮಲ್ಲಿರುವ ಕಾಳಧನ ಮತ್ತು ವಿದೇಶದಲ್ಲಿರುವ ಸ್ವದೇಶಿ ಹಣದ ಬಗ್ಗೆ ಅವ್ಯಾಹತವಾಗಿ ಸಾರ್ವಜನಿಕ ಚರ್ಚೆಗಳು ಆಗುತ್ತಿರುವ ವರ್ತಮಾನದ ಸನ್ನಿವೇಶದಲ್ಲಿ ಇಂತಹ ಶ್ವೇತಪತ್ರವೊಂದು ಪ್ರಕಟವಾಗುವ ಅಗತ್ಯವಿತ್ತು. ಅದರಂತೆ ಇದೇ ಮೇ 2012 ರಲ್ಲಿ ಕೇಂದ್ರ ನೇರ ತೆರಿಗೆ ಮಂಡಳಿಯ ನೇತೃತ್ವದಲ್ಲಿ ಕಾಳಧನದ ಮೇಲೊಂದು ಶ್ವೇತಪತ್ರ ಪ್ರಕಟವಾಗಿದೆ.

ಹಣದ ಬಣ್ಣದಲ್ಲಿ ಹಲವು ಬಗೆ. ದೇವನೊಬ್ಬ ನಾಮ ಹಲವು ಎಂಬಂತೆ ಹಣದ ಮೌಲ್ಯ ಮತ್ತು ರೂಪ ಒಂದೇ ಆದರೂ ಅದು ಸನ್ನಿವೇಶಕ್ಕೆ ತಕ್ಕಂತೆ ತನ್ನ ಬಣ್ಣಗಳನ್ನು ಬದಲಿಸಿಕೊಳ್ಳುತ್ತಾ ಹೋಗುತ್ತದೆ. ಜೀವನದ ಅಗತ್ಯಕ್ಕೆ ಸ್ವಾಭಾವಿಕವಾಗಿ ಯಾವುದೇ ವೃತ್ತಿಯಿಂದ ಗಳಿಸಿದ ಹಣ ಅಮೂಲ್ಯವೇ. ಆದರೆ ಅಂತಹ ಹಣ ತನ್ನ ವಿಭಿನ್ನ ರೂಪ ಪಡೆದುಕೊಳ್ಳುವುದು ಸರ್ಕಾರದ ಕಾನೂನು ಕಟ್ಟಳೆಗಳಿಗೆ ತನ್ನನ್ನು ತಾನು ಒಡ್ಡಿಕೊಂಡಾಗ. ಮುಖ್ಯವಾಗಿ ತೆರಿಗೆ ಕಾನೂನುಗಳು. ತನ್ನ ಸ್ವಂತ ಗಳಿಕೆಯಿಂದ ಬಂದ ಹಣಕ್ಕೆ ಸೂಕ್ತ ತೆರಿಗೆ ಪಾವತಿ ಮಾಡಿ ಅಧಿಕೃತವಾಗಿ ತನ್ನಲ್ಲಿ ಉಳಿಸಿಕೊಂಡ ಹಣವನ್ನು ಶ್ವೇತಧನ ಎನ್ನುವುದು. ಶ್ವೇತಧನವು ಅಮೂಲ್ಯ, ಪವಿತ್ರ ಮತ್ತು ಸರ್ವತಂತ್ರ ಸ್ವತಂತ್ರ. ಅದನ್ನು ಸರ್ಕಾರವೂ ಸೇರಿ ಯಾರೂ ವಶಪಡಿಸಿಕೊಳ್ಳಲಾಗದು. ಹಾಗೆಯೇ ತನ್ನ ಸ್ವಂತ ಅಧಿಕೃತ ಗಳಿಕೆಯಿಂದ ಬಂದ ಹಣಕ್ಕೆ ತೆರಿಗೆ ಕೊಡದೆ ಅಥವಾ ಕಡಿಮೆ ತೆರಿಗೆ ಕಟ್ಟಿ ಉಳಿಸಿಕೊಂಡ ಹಣವೇ ಕಾಳಧನ. ಶ್ವೇತಧನ ಮತ್ತು ಕಾಳಧನವಲ್ಲದೆ ಇನ್ನೊಂದು ಬಗೆಯ ಹಣವಿದೆ. ಅದು ಕೆಂಪುಧನ. ಕಾನೂನುಬಾಹಿರವಾದ ರೀತಿಯಲ್ಲಿ ಹಣವನ್ನು ಗಳಿಸಿ, ತೆರಿಗೆಯನ್ನು ಕೊಡದೆ ಶೇಖರಿಸಿಕೊಂಡಿರುವ ಹಣವೇ ಕೆಂಪುಧನ. ಕಾಳಧನವನ್ನು ಸೂಕ್ತ ತೆರಿಗೆ, ಬಡ್ಡಿ ಮತ್ತು ದಂಡವನ್ನು ತೆತ್ತು ಶ್ವೇತಧನವನ್ನಾಗಿ ಪರಿವರ್ತಿಸಬಹುದು. ಅದು ಕಾನೂನು ರೀತ್ಯಾ ಸ್ವಾಗತಾರ್ಹ. ಆದರೆ ಕೆಂಪುಧನ ಯಾವಾಗಲೂ ಕೆಂಪೇ. ಅದರ ಬಣ್ಣ ತೆರಿಗೆ ಕಟ್ಟಿದರೂ ಕೂಡ ಬದಲಾಗುವುದಿಲ್ಲ. ಅದು ಯಾವಾಗಲೂ ರಕ್ತಸಿಕ್ತವೇ. ಅಕ್ಷಮ್ಯ ಅಪರಾಧಪೂರಿತ. ಉದಾಹರಣೆಗೆ ಕಾಮನ್‌ವೆಲ್ತ್ ಕ್ರೀಡಾಕೂಟ, 2ಜಿ ಹಗರಣದ ಹಣ ಮತ್ತು ಗಣಿಧಣಿಗಳ ಧನರಾಶಿ. ಸರ್ಕಾರ ಹೊರತಂದಿರುವ ಶ್ವೇತಪತ್ರದಲ್ಲಿ ಶ್ವೇತಧನ ಮತ್ತು ಕಾಳಧನದ ಬಗ್ಗೆ ಚರ್ಚೆಯನ್ನು ಸೀಮಿತಗೊಳಿಸಲಾಗಿದೆ. ಕೆಂಪುಧನದ ಬಗ್ಗೆ ಪರೋಕ್ಷವಾದ ಉಲ್ಲೇಖವಿದ್ದರೂ ಎಲ್ಲಿಯೂ ಅದರ ಬಗ್ಗೆ ದೀರ್ಘವಾದ ವಿವರಣೆಗಳಿಲ್ಲ. ವಿದೇಶದ ಬ್ಯಾಂಕುಗಳಲ್ಲಿ ನಮ್ಮ ದೇಶದ ಪ್ರಜೆಗಳು ಇಟ್ಟಿರುವ ಭಾರೀ ಮೊತ್ತದ ಠೇವಣಿಗಳ ಮೂಲ ಕೆಂಪುಧನವೇ ಎಂಬುದು ಬಲ್ಲವರ ಇಂಗಿತವಾದರೂ ಅಧಿಕೃತ ಪ್ರಕಟಣೆ ನೀಡಲು ಸರ್ಕಾರಕ್ಕೆ ಅನೇಕ ಅಡೆತಡೆಗಳಿವೆ.



ಭಾರತದ ಅರ್ಥವ್ಯವಸ್ಥೆಯಲ್ಲಿ ಕಾಳಧನದ ಬಾಧೆಯನ್ನು ಹತ್ತಿಕ್ಕಲು ಹಲವಾರು ಕಾನೂನುಗಳ ಬಲೆಯನ್ನೇ ಸರ್ಕಾರ ಹರಡಿದೆ. ಆದಾಯ ತೆರಿಗೆ ಕಾನೂನು ಮತ್ತು ಅದರಡಿಯಲ್ಲಿ ಅಪರಾಧ ತನಿಖಾ ದಳದ ರಚನೆ, ನಗದು ಚಲಾವಣೆ ತಡೆಗಟ್ಟಲು ಪ್ರತ್ಯೇಕ ಕಾನೂನು, ಬೇನಾಮಿ ವ್ಯವಹಾರವನ್ನು ನಿಯಂತ್ರಿಸುವ ಕಾಯಿದೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ದ್ವಿ ತೆರಿಗೆ ತಪ್ಪಿಸಲು ಒಪ್ಪಂದಗಳು, ಬೋಫೋರ್ಸ್ ಪ್ರಕರಣದ ಫಲವಾಗಿ ಬಂದ ವಿದೇಶಿಯರಿಗೆ ನೀಡುವ ಹಣ ನಿಷೇಧದ ಮಸೂದೆ, ಲೋಕಪಾಲ್ ಮಸೂದೆ, ಲೋಕಾಯುಕ್ತ ಕಾರ್ಯಾಚರಣೆ, ಮತ್ತು ನ್ಯಾಯಾಂಗದಲ್ಲಿ ಭ್ರಷ್ಟತೆಯನ್ನು ನಿಲ್ಲಿಸುವ ಸಲುವಾಗಿ ತಂದಿರುವ ನ್ಯಾಯಾಂಗ ಗುಣಮಟ್ಟ ಮತ್ತು ಜವಾಬ್ದಾರಿ ಮಸೂದೆ ಇವೆಲ್ಲ ಕಾಳಧನವನ್ನು ಕಡಿಮೆ ಮಾಡುತ್ತವೆ ಎಂದು ಸರ್ಕಾರ ನಂಬಿ ಕೂತಿರುವ ಕ್ರಮಗಳು. ಈ ಎಲ್ಲಾ ಕಾನೂನು ಕಟ್ಟಳೆಗಳು ಹೇಗೆ ಕಾಳಧನವನ್ನು ಹತ್ತಿಕ್ಕಲು ಸರ್ಕಾರದ ಕೈಯಲ್ಲಿ ಆಯುಧಗಳಾಗಿ ಉಪಯೋಗಿಸಲ್ಪಡುತ್ತವೆ ಎಂದು ಶ್ವೇತಪತ್ರದಲ್ಲಿ ಚರ್ಚಿಸಲಾಗಿದೆ.

ಕಾಳಧನದ ಸಮಸ್ಯೆ ಸರ್ಕಾರಕ್ಕೆ ಇದಿರಾಗಿರುವುದು ಇಂದು ನಿನ್ನೆಯದಲ್ಲ. ಇದು ಶತಶತಮಾನಗಳಿಂದ ನಡೆದು ಬಂದ ದಾರಿಯ ಗುರುತು. ಈಗ ಇದರ ಗುರುತು ಗಾಯದಂತೆ ಗೋಚರವಾಗುತ್ತಿದೆ ಅಷ್ಟೆ. ಕ್ರಿಸ್ತಪೂರ್ವ 321–296ರಲ್ಲಿ ರಚಿತವಾದ ಚಾಣಕ್ಯನ ಅರ್ಥಶಾಸ್ತ್ರದ ಪ್ರಕಾರ ಕಾಳಧನದ ಮೂಲ ಕ್ರೂರವಾದ ತೆರಿಗೆಗಳು. ಚಾಣಕ್ಯ ಹೇಳುತ್ತಾನೆ "ದುಂಬಿಯೊಂದು ಪುಷ್ಪದಿಂದ ಮಕರಂದವನ್ನು ಹೀರುವ ಹಾಗೆ ರಾಜನು ಪ್ರಜೆಗಳಿಗೆ ಹಿತಕರ ರೀತಿಯಲ್ಲಿ ತೆರಿಗೆಯನ್ನು ಹೇರಬೇಕೇ ಹೊರತು ಗಿಡಗಂಟಿಗಳ ಹೂಮೊಗ್ಗು ರೆಂಬೆಕೊಂಬೆಗಳನ್ನು ಘಾಸಿಗೊಳಿಸಲಾಗದು". ನಮ್ಮ ಸರ್ಕಾರವು ಕಳೆದ ಹಲವು ದಶಕಗಳಿಂದ ಹೊರಲಾರದಷ್ಟು ತೆರಿಗೆ ಹೊರೆಯನ್ನು ಜನರ ಮೇಲೆ ಹೊರಿಸುತ್ತಾ ಬಂದ ಪರಿಣಾಮವೇ ಇಂದಿನ ಕಾಳಧನದ ಗಾತ್ರ ಬೆಟ್ಟದಷ್ಟಾಗಲು ಕಾರಣವಾಗಿದೆ.

ಕ್ರಿಸ್ತಶಕ 1200ರಲ್ಲಿ ಕರ್ನಾಟಕದಲ್ಲಿ ಬಸವಣ್ಣ ಬಿಜ್ಜಳನ ರಾಜ್ಯದ ಪ್ರಧಾನಮಂತ್ರಿಯಾಗಿ ತೆರಿಗೆ ವಿಧಿಸುವ ಪರಮಾಧಿಕಾರವನ್ನು ಹೊಂದಿದ್ದು ಸ್ವತ: ಕಾಳಧನದ ವಿರೋಧಿಯಾಗಿದ್ದ. ಕಳ್ಳನಾಣ್ಯ ಸಲುಗೆಗೆ ಸಲ್ಲದು ಎಂಬ ಆತನ ಎಚ್ಚರಿಕೆಯ ಮಾತು ಇಂದಿಗೂ ಸತ್ಯವಾಗಿದೆ. ಆಧ್ಯಾತ್ಮದ ಚಿಂತನೆಯ ಹಿನ್ನೆಲೆಯಲ್ಲಿ ತನ್ನ ಆಡಳಿತ ಅನುಭವವನ್ನು ಮೇಳೈಸಿ ಬಸವಣ್ಣ ಬರೆದ ವಚನದ ಪೂರ್ಣ ಪಾಠ ಇಂತಿದೆ.

**ಭಂಡಾರ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ ಹೋಗಬಾರದು**
**ಕಳ್ಳನಾಣ್ಯ ಸಲುಗೆಗೆ ಸಲ್ಲದು, ಕಳ್ಳನಾಣ್ಯವ ಸಲಲೀಯರಯ್ಯ**
**ಭಕ್ತಿಯೆಂಬ ಭಂಡಾರಕ್ಕೆ ಜಂಗಮವೇ ಸುಂಕಿಗ ಕೂಡಲಸಂಗಮದೇವಾ**

ಇದು ಕಾಳಧನದ ಕಠೋರ ಕಥೆ ಎಂದು ಒತ್ತಟ್ಟಿಗಿರಿಸಿ ಮತ್ತೆ ಶ್ವೇತಪತ್ರದ ಪುಟಗಳನ್ನು ತಿರುಗಿಸಿದರೆ ಅಧ್ಯಾಯ 5 ಪ್ಯಾರಾ ಸಂಖ್ಯೆ 2.36ರಲ್ಲಿ ಸಹಕಾರಿ ರಂಗದ ಬಗ್ಗೆ ಉಲ್ಲೇಖವಿರುವುದನ್ನು ಗಮನಿಸಬಹುದು. ಸಹಕಾರಿ ರಂಗದಲ್ಲಿ ಕಾಳ ಧನದ ಚಲಾವಣೆಯನ್ನು ಹತ್ತಿಕ್ಕಲು ನಿಷ್ಠುರವಾದ KYC ನಿಯಮಾವಳಿಯನ್ನು ಜಾರಿ ತರುವಂತೆ ಶ್ವೇತಪತ್ರ ಆಗ್ರಹಿಸಿದೆ. ಥರ್ಡ್ ಪಾರ್ಟಿ ಚೆಕ್ಕುಗಳನ್ನು ನಗದೀಕರಿಸುವ ವ್ಯವಹಾರಗಳನ್ನು ಯಥೇಚ್ಛವಾಗಿ ನಡೆಸುತ್ತಿರುವ ಸಹಕಾರಿ ಸಂಘಗಳು ಸರ್ಕಾರದ ಈ ನಡೆಯಿಂದ ಎಚ್ಚೆತ್ತುಕೊಂಡು ರಿಜರ್ವ್ ಬ್ಯಾಂಕಿನ ನಿಗದಿತ ನಿರ್ದೇಶನದಂತೆ KYC ನಿಯಮಾವಳಿಗಳನ್ನು ಪಾಲಿಸಬೇಕಿದೆ. ಇಲ್ಲವಾದಲ್ಲಿ ಈಗಿರುವ 50000 ರೂಪಾಯಿಗಳ ಚೆಕ್ ನಗದೀಕರಣ ಸೌಲಭ್ಯದ ಮಿತಿಯನ್ನು ಕಳೆದುಕೊಳ್ಳುವ ಅಪಾಯವಿದೆ. KYCಗೆ ಒಳಗಾಗದ ಚೆಕ್ಕಿನ ನಗದೀಕರಣ ಕಳ್ಳನಾಣ್ಯದ ಸೃಷ್ಟಿಗೆ ಕಾರಣವಾಗುತ್ತದೆ. ಕಳ್ಳನಾಣ್ಯ ಯಾರ ಸಲುಗೆಗೂ ಸಲ್ಲದು ಅಲ್ಲವೇ? ■

## ವಿಧಾನ ಪರಿಷತ್ತಿಗೆ ಆಯ್ಕೆಯಾಗಿರುವ ಹಿರಿಯ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಅಭಿನಂದನೆಗಳು



ಶ್ರೀ ಎಸ್.ಆರ್. ಪಾಟೀಲ್
ವಿಪಕ್ಷ ನಾಯಕರು



ಕ್ಯಾ. ಗಣೇಶ್ ಕಾರ್ಣಿಕ್



ಶ್ರೀ ಭಾನುಪ್ರಕಾಶ್

## ಸಂಯುಕ್ತ ಸಹಕಾರಿಯ 11ನೇ ಸಾಮಾನ್ಯ ಸಭೆ

ಸಂಯುಕ್ತ ಸಹಕಾರಿಯ 11ನೇ ಸಾಮಾನ್ಯ ಸಭೆಯು 29-08-2012 ರಂದು ಬೆಂಗಳೂರಿನ ಪುಟ್ಟಣ್ಣಚೆಟ್ಟಿ ಪುರಭವನ – ಟೌನ್‌ಹಾಲ್‌ನಲ್ಲಿ ಬೆಳಗ್ಗೆ 11-00 ಗಂಟೆಗೆ ಏರ್ಪಡಿಸಿದೆ. ರಾಜ್ಯದ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಗಮನಿಸಿ ತಮ್ಮ ಗುರುತಿನ ಚೀಟಿಯನ್ನು ಸಂಯುಕ್ತ ಸಹಕಾರಿಯ ಕಛೇರಿಯ ಅವಧಿಯಲ್ಲಿ ಪಡೆದುಕೊಳ್ಳಲು ಕೋರಿದೆ.

## ಆಗಸ್ಟ್ 30ಕ್ಕೆ "ಮಹಿಳಾ ಸಹಕಾರಿಗಳ ಬೃಹತ್ ಸಮಾವೇಶ"

ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಮಹಿಳೆಯರನ್ನು ಹೆಚ್ಚು ಹೆಚ್ಚಾಗಿ ಬರಮಾಡಿಕೊಂಡು ಅವರುಗಳ ಆರ್ಥಿಕ ಸಾಮಾಜಿಕ ಹಾಗೂ ಶೈಕ್ಷಣಿಕ ಮಟ್ಟದಲ್ಲಿ ಸುಧಾರಣೆಯನ್ನು ಕಂಡುಕೊಳ್ಳಲು ಹೆಚ್ಚು ಮಹಿಳೆಯರನ್ನು ಆರ್ಥಿಕ ಸಬಲೀಕರಣ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುವಂತೆ ರಾಜ್ಯ ಮಟ್ಟದಲ್ಲಿ ಮಹಿಳಾ ಸಹಕಾರಿಗಳ ಬೃಹತ್ ಸಮಾವೇಶವೊಂದನ್ನು ಇದೇ ಪ್ರಥಮಬಾರಿಗೆ ಬೆಂಗಳೂರಿನ ಟೌನ್‌ಹಾಲ್‌ನಲ್ಲಿ 30 ಆಗಸ್ಟ್ 2012ರಂದು ಹಮ್ಮಿಕೊಳ್ಳಲು ತೀರ್ಮಾನಿಸಿದೆ.

ಈ ಕಾರ್ಯಕ್ರಮದಲ್ಲಿ ಸಹಕಾರಿ ಕ್ಷೇತ್ರದ ಮೂಲಕ ಆರ್ಥಿಕ ಅಭಿವೃದ್ಧಿ ಹೇಗೆ ಸಾಧ್ಯ, ಕೇಂದ್ರ ಸರಕಾರದ ಹಾಗೂ ರಾಜ್ಯ ಸರಕಾರದ ಮತ್ತು ವಿವಿಧ ಸಂಘ ಸಂಸ್ಥೆಗಳ ಮೂಲಕ ಮಹಿಳೆಯರಿಗೆ ದೊರಕುವ ಸೌಲಭ್ಯಗಳು, ವಿವಿಧ ಇಲಾಖೆಗಳಲ್ಲಿ ಮಹಿಳೆಯ ಅಭಿವೃದ್ಧಿಗಾಗಿರುವ ಅವಕಾಶಗಳು ಇತ್ಯಾದಿ ಮಹತ್ವದ ವಿಷಯಗಳ ಬಗ್ಗೆ ಚರ್ಚೆಗಳಿಗೆ ವ್ಯವಸ್ಥೆ ಮಾಡಲಾಗುವುದು.

ಈ ಸಂದರ್ಭದಲ್ಲಿ ಹೊರತರಲಾಗುವ ಸ್ಮರಣ ಸಂಚಿಕೆಗೆ ಸಹಕಾರಿಗಳು/ಸಹಕಾರಿ ಸಂಘಗಳು ಮತ್ತು ನುರಿತ ಹಾಗೂ ಆಸಕ್ತ ಮಹಿಳಾ ಸಹಕಾರಿಗಳು ಲೇಖನಗಳನ್ನು ಕಳುಹಿಸಬಹುದಾಗಿದೆ. ಲೇಖನದೊಂದಿಗೆ ತಮ್ಮ ಭಾವಚಿತ್ರವನ್ನು ಕಳುಹಿಸಬೇಕು. ಲೇಖನ 2-3 ಪುಟಗಳಿಗೆ ಸೀಮಿತವಾಗಿರಬೇಕು.



### ಕಾರ್ಯಕ್ರಮದ ವಿವರಗಳು

1. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಪ್ರತಿ ಸೌಹಾರ್ದ ಸಹಕಾರಿಯ ಕನಿಷ್ಠ ಇಬ್ಬರು ಮಹಿಳಾ ಪ್ರತಿನಿಧಿಗಳನ್ನು ಕಳುಹಿಸಲು ಅವಕಾಶವಿದೆ.
2. ಪ್ರತಿನಿಧಿ ಶುಲ್ಕ ತಲಾ ರೂ 100/-ಗಳು ಮಾತ್ರ. ಕಾರ್ಯಕ್ರಮಕ್ಕೆ ಬಂದು ಹೋಗುವ ಪ್ರಯಾಣ ಶುಲ್ಕ ಮತ್ತು ಇತರೆ ವೆಚ್ಚಗಳನ್ನು ಸೌಹಾರ್ದ ಸಹಕಾರಿಗಳಿಂದ ಅಥವಾ ಭಾಗವಹಿಸುವ ಪ್ರತಿನಿಧಿಗಳೇ ಭರಿಸಬೇಕು.
3. ಸಮಾವೇಶದ ಪ್ರತಿನಿಧಿಗಳಿಗೆ ಬೆಳಿಗ್ಗೆ ಉಪಾಹಾರ, ಮಧ್ಯಾಹ್ನದ ಊಟ, ಅಧ್ಯಯನ ಸಾಹಿತ್ಯಗಳನ್ನು ಸಂಯುಕ್ತ ಸಹಕಾರಿಯು ಒದಗಿಸುವ ವ್ಯವಸ್ಥೆ ಮಾಡುತ್ತದೆ.
4. ಕಾರ್ಯಕ್ರಮದಲ್ಲಿ 1959 ರ ಸಹಕಾರಿ ಕಾಯ್ದೆಯಲ್ಲಿ ನೋಂದಣೆಯಾಗಿ ಕಾರ್ಯ ನಿರ್ವಹಿಸುತ್ತಿರುವ ರಾಜ್ಯದ ವಿವಿಧ ಜಿಲ್ಲೆಗಳ ಮಹಿಳಾ ಸಹಕಾರಿ ಸಂಘಗಳ ಪದಾಧಿಕಾರಿಗಳು ಹಾಗೂ ಮಹಿಳೆಯರು ಸದಸ್ಯರಾಗಿರುವ ಪದಾಧಿಕಾರಿಗಳಾಗಿರುವ ಸಾಮಾನ್ಯ ಸಹಕಾರಿ ಸಂಘಗಳು ಭಾಗವಹಿಸಲು ಅವಕಾಶವಿದೆ.
5. ಲೇಖನಗಳನ್ನು ಕಳುಹಿಸುವ ಕೊನೆಯ ದಿನಾಂಕ : 16-8-2012
6. ಪ್ರತಿನಿಧಿಗಳ ನೋಂದಣಿ ಕೊನೆಯ ದಿನಾಂಕ : 10-8-2012

# ಹಣಕಾಸು ಕ್ಷೇತ್ರದ ಮಾಹಿತಿಗಾಗಿ ಆರ್‌ಬಿಐ (RBI) ವೆಬ್‌ತಾಣ http://www.rbi.org.in



**ರಘುನಂದನ ಕೆ.**
ಸಹಪ್ರಧಾನ ವ್ಯವಸ್ಥಾಪಕ,
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

http://www.rbi.org.in

Collab Shortcut Later Daily Works Bookmarklets •RAC +ZB +Upload DI-624 Clip to Evernote Tabs Jequery

1 unread - Neus Plurk P... Firefox web browser | F...




ಸಂಪೂರ್ಣ ವಿಶ್ವವೇ ಒಂದು ಗ್ರಾಮ ಎಂಬ ಜಾಗತಿಕ ಪರಿಕಲ್ಪನೆಯಲ್ಲಿನ ಇಂದಿನ ತಂತ್ರಜ್ಞಾನದ ಯುಗದಲ್ಲಿ ಆರ್ಥಿಕ ಕ್ಷೇತ್ರ ಪ್ರತಿಕ್ಷಣವೂ ಬದಲಾವಣೆಗೆ ಒಳಗಾಗುತ್ತಿದೆ. ಎಲ್ಲೋ ಅಪ್ಪಳಿಸುವ ಆರ್ಥಿಕ ಹಿಂಜರಿತ, ಮುಗ್ಗಟ್ಟುಗಳು ನಮ್ಮ ದೇಶದ ಆರ್ಥಿಕತೆಯನ್ನು ಪ್ರಭಾವಿಸುತ್ತದೆ. ನಮ್ಮ ಸಂಸ್ಥೆ, ನಮ್ಮ ರಾಜ್ಯ, ನಮ್ಮ ದೇಶದ ಆರ್ಥಿಕ ಸ್ಥಿತಿಗತಿ ಮಾತ್ರ ತಿಳಿದಿದ್ದರೆ ಸಾಕು ಎನ್ನುವ ಕಾಲಮಾನದಿಂದ ನಾವೀಗ ಬಹುದೂರ ಸಾಗಿ ಬಂದಿದ್ದೇವೆ.

ಈ ಹಿನ್ನಲೆಯಲ್ಲಿ ಹಣಕಾಸು ಹಾಗೂ ಬ್ಯಾಂಕಿಂಗ್ ಕ್ಷೇತ್ರದ ಅವಕಾಶಗಳು ಮತ್ತು ತೊಂದರೆಗಳನ್ನು ಪ್ರತಿ ಕ್ಷಣ ಗಮನಿಸಬೇಕಾಗುತ್ತದೆ. ಹೀಗೆ ಗಮನವಹಿಸುವಲ್ಲಿ ಅಂತರ್ಜಾಲ ಮಾಧ್ಯಮ ನಮಗೆ ಅತ್ಯಂತ ಉಪಯುಕ್ತವಾದ ಮಾಹಿತಿಗಳನ್ನು ಒದಗಿಸುತ್ತದೆ. ಬ್ಯಾಂಕ್‌ಗಳು ಮಾತ್ರವಲ್ಲದೆ ಹಣಕಾಸು ವ್ಯವಹಾರದಲ್ಲಿ ತೊಡಗಿರುವ ಯಾವುದೇ ಸಂಸ್ಥೆಗಳು ಆರ್ಥಿಕ ಕ್ಷೇತ್ರದ ಬೆಳವಣಿಗೆಯತ್ತ ಜಾಗೃತವಾಗಿರಬೇಕಾಗುತ್ತದೆ. ಭಾರತದ ಆರ್ಥಿಕತೆಯನ್ನು ನೇರವಾಗಿಯೂ ಹಾಗೂ ಪರೋಕ್ಷವಾಗಿಯೂ ನಿಯಂತ್ರಿ ಸುವ ಪ್ರಭಾವಿಸುವ ಸಂಸ್ಥೆ, ಹಣಕಾಸು ನೀತಿಯಲ್ಲಿ ಪ್ರಮುಖ ಪಾತ್ರ ವಹಿಸುವ ಭಾರತದ ಕೇಂದ್ರ ಬ್ಯಾಂಕ್ – "ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ" (RBI).

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಆಕ್ಟ್ 1934ರಂತೆ ಏಪ್ರಿಲ್ 01, 1935ರಂದು ಆರ್‌ಬಿಐ ನ್ನು ಖಾಸಗಿ ಒಡೆತನದಲ್ಲಿ ಕೋಲ್ಕತ್ತಾದಲ್ಲಿ ಪ್ರಾರಂಭಿಸಲಾಯಿತು. 1937ರಲ್ಲಿ ಕೇಂದ್ರ ಕಛೇರಿಯನ್ನು ಮುಂಬೈಗೆ ಬದಲಾಯಿಸಲಾಯಿತು. ಭಾರತದ ಸ್ವಾತಂತ್ರ್ಯ ನಂತರ 1949ರಲ್ಲಿ ಇದನ್ನು ರಾಷ್ಟ್ರೀಕೃತಗೊಳಿಸಲಾಯಿತು. ಕೇಂದ್ರ ಸರ್ಕಾರದ ಹಣಕಾಸು ನೀತಿಯಲ್ಲಿ ಪ್ರಮುಖ ಪಾತ್ರ ವಹಿಸುವ ಇದು, ಭಾರತದ ಕರೆನ್ಸಿ ಮುದ್ರಣ, ವಿದೇಶಿ ವಿನಿಮಯ ನಿರ್ವಹಣೆ, ಭಾರತದ ಬ್ಯಾಂಕಿಂಗ್ ಕ್ಷೇತ್ರದ ನಿಯಂತ್ರಣ, ಹಣಕಾಸಿನ ಸ್ಥಿರತೆಯ ನಿರ್ವಹಣೆ ಮತ್ತು ಅಭಿವೃದ್ಧಿ ಇತ್ಯಾದಿಗಳನ್ನು ನಿರ್ವಹಿಸುವ ವಿತ್ತೀಯ ಪ್ರಾಧಿಕಾರವಾಗಿದೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ವೆಬ್‌ತಾಣದ ಪರಿಚಯವನ್ನು ಈ ಸಂಚಿಕೆಯಲ್ಲಿ ಮಾಡಿಕೊಡಲಾಗುತ್ತಿದೆ.

- ಈ ವೆಬ್‌ತಾಣದಲ್ಲಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಆರಂಭವಾದ ಬಗೆ, ಅದರ ಕಾರ್ಯಚಟುವಟಿಕೆಗಳ ಸ್ವರೂಪ ಮತ್ತು ಲಕ್ಷಣಗಳ ಮಾಹಿತಿ, ಆರ್‌ಬಿಐ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸುವ ಕೈಪಿಡಿ ಇತ್ಯಾದಿಗಳನ್ನು ನೋಡಬಹುದು.
- ಈ ಸಂಸ್ಥೆಯ ಕೇಂದ್ರೀಯ ಆಡಳಿತ ಮಂಡಳಿ, ನಿರ್ದೇಶಕರ ವಿವರಗಳು, ವ್ಯವಸ್ಥಾಪನಾ ವಿಧಾನ, ಹಣಕಾಸು ಮೇಲ್ವಿಚಾರಣಾ ಸಮಿತಿಯೂ ಸೇರಿದಂತೆ ಸಮಿತಿಗಳ ವಿವರಗಳು, ಸ್ಥಳೀಯ ಮಂಡಳಿಗಳ ವಿವರ, ಪ್ರತ್ಯೇಕ ಇಲಾಖೆಗಳ ವಿವರಗಳನ್ನು ಪಡೆಯಬಹುದು. ಆರ್‌ಬಿಐನ 19 ಪ್ರಾದೇಶಿಕ ಕಛೇರಿಗಳ ಹಾಗೂ 09 ಉಪ ಕಛೇರಿಗಳ ವಿವರ ಹಾಗೂ ವಿಳಾಸವನ್ನು ಪಡೆಯಬಹುದು.
- ಆರ್‌ಬಿಐನ ಎಲ್ಲ ಅಧಿಸೂಚನೆಗಳನ್ನು ಹಾಗೂ ವಾರ್ಷಿಕ, ಅರ್ಧವಾರ್ಷಿಕ, ತ್ರೈಮಾಸಿಕ, ಮಾಸಿಕ ಪ್ರಕಟಣೆಗಳನ್ನು, ವಿವಿಧ ಭಾಷಣಗಳ ಮುದ್ರಿತ ರೂಪಗಳನ್ನು, ಪ್ರತಿದಿನದ ಪತ್ರಿಕಾ ಪ್ರಕಟಣೆಗಳನ್ನು, ಹೇಳಿಕೆಗಳನ್ನು, ಸುತ್ತೋಲೆಗಳನ್ನು ಈ ವೆಬ್‌ತಾಣದಿಂದ ಪಡೆಯಬಹುದಾಗಿದೆ.
- ವೆಬ್‌ತಾಣದ ಡೇಟಾಬೇಸ್ ವಿಭಾಗದಲ್ಲಿ ಭಾರತದ ಆರ್ಥಿಕತೆಯ ದತ್ತಾಂಶ ಗಳು ಹಾಗೂ ಹಣಕಾಸು ಮತ್ತು ಬ್ಯಾಂಕಿಂಗ್ ಕ್ಷೇತ್ರದಲ್ಲಿನ ಸಂಶೋಧನೆಗಳು, ಅಂಕಿ ಅಂಶಗಳು, ಸಮೀಕ್ಷೆಗಳ ವಿವರಗಳನ್ನು ಪಡೆಯಬಹುದು.
- ಆರ್‌ಬಿಐನ ವಿವಿಧ ಕಾರ್ಯಕ್ರಮಗಳ ವಿವರಗಳು ಹಾಗೂ ಅನೇಕ ಪ್ರಕಾರದ ನಮೂನೆಗಳು (Form)ಗಳನ್ನು ಕೂಡ ಪಡೆಯಬಹುದಾಗಿದೆ.
- ಪ್ರಸ್ತುತ ಇರುವ ರಿಸರ್ವ ರೆಪ್ಪೊ ಪ್ರಮಾಣ, ರೆಪೋ ರಿವರ್ಸ ರೆಪೋ ದರಗಳು, ಠೇವಣಿ ಹಾಗೂ ಸಾಲದ ಬಡ್ಡಿ ದರಗಳು, ಮಾರುಕಟ್ಟೆ ಟ್ರೆಂಡ್‌ಗಳನ್ನು ಕೂಡ ನೋಡಬಹುದು.
- ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ 25ಕ್ಕೂ ಹೆಚ್ಚು ವೆಬ್‌ತಾಣಗಳಿಗೆ ಲಿಂಕ್ ಕೂಡ ಒದಗಿಸಲಾಗಿದೆ. ಸಾಮಾನ್ಯ ಜನತೆಗಾಗಿಯೇ ಪ್ರತ್ಯೇಕ ವಿಭಾಗವೊಂದನ್ನು (For Common Person) ನೀಡಲಾಗಿದ್ದು ಕರೆನ್ಸಿ ನೋಟುಗಳ ಪರಿಚಯ, ಖೋಟಾ ನೋಟುಗಳ ನಿರ್ವಹಣೆ, ಬ್ಯಾಂಕ್‌ಗಳ ಬಗ್ಗೆ ದೂರು ನೀಡುವ ಮಾಹಿತಿ ಇತ್ಯಾದಿಗಳನ್ನು ಒದಗಿಸಲಾಗಿದೆ.
- ಹಣಕಾಸು ಶಿಕ್ಷಣಕ್ಕಾಗಿಯೂ (Financial Education) ಪ್ರತ್ಯೇಕ ವಿಭಾಗ ರೂಪಿಸಲಾಗಿದ್ದು ಮಕ್ಕಳಿಗೆ ಅರ್ಥವಾಗುವಂತೆ ಆಟ, ಕಿರು ಚಿತ್ರ ಹಾಗೂ ಕಥೆಗಳ ರೂಪದಲ್ಲಿ ಹಣಕಾಸು ಶಿಕ್ಷಣ ಒದಗಿಸುವ ವ್ಯವಸ್ಥೆಯನ್ನು ಕೂಡ ಈ ವೆಬ್‌ತಾಣದಲ್ಲಿ ನೋಡಬಹುದಾಗಿದೆ.
- ಯುವ ಪ್ರತಿಭಾ ಪುರಸ್ಕಾರ ಯೋಜನೆಯ (Young Scholars Award Scheme 2012) ಮೂಲಕ ವಿದ್ಯಾರ್ಥಿಗಳಲ್ಲಿ ಆರ್‌ಬಿಐ ಬಗ್ಗೆ ತಿಳಿಯುವಂತೆ ಆಸಕ್ತಿ ಮೂಡಿಸುತ್ತಿದ್ದು ಈ ಯೋಜನೆಯ ಸಂಪೂರ್ಣ ವಿವರಗಳನ್ನು ಈ ವೆಬ್‌ತಾಣದಲ್ಲಿ ಪಡೆಯಬಹುದಾಗಿರುತ್ತದೆ.

ಹಣಕಾಸು ವ್ಯವಹಾರದಲ್ಲಿ ತೊಡಗಿರುವ ಯಾವುದೇ ಸಂಸ್ಥೆಗಳಾಗಲಿ ಅಥವಾ ವಾಣಿಜ್ಯ ಆರ್ಥಿಕ ವಿಷಯಗಳಲ್ಲಿ ಆಸಕ್ತಿ ಇರುವವರು ಆರ್‌ಬಿಐನ ಕಾರ್ಯಚಟುವಟಿಕೆ, ನೀತಿನಿರೂಪಣೆಗಳೆಡೆಗೆ ಸದಾ ಜಾಗೃತರಾಗಿರುವುದಕ್ಕಾಗಿ ಹಾಗೂ ಆರ್ಥಿಕ ಕ್ಷೇತ್ರದ ಬೆಳವಣಿಗೆಯನ್ನು ತಿಳಿದುಕೊಳ್ಳುವುದಕ್ಕಾಗಿ ಈ ವೆಬ್‌ತಾಣದ ಸಂಪರ್ಕದಲ್ಲಿರಬಹುದಾಗಿದೆ.

There was one error opening the page. For more information, choose Activity from the Window menu.

# ಚರಕ : ಗ್ರಾಮೀಣಾಭಿವೃದ್ಧಿಯ ಹೊಸ ಸಾಧ್ಯತೆ

**ಪಾರಂಪರಿಕ ನೇಕಾರಿಕೆ ಇಲ್ಲದ ಮಲೆನಾಡಿನಲ್ಲಿ ಸ್ಥಳೀಯ ಮಹಿಳೆಯರ ಶ್ರಮದಿಂದ ಬೆಳೆದ ಚರಕದ ಸಾಧನೆ ಅಸಾಧಾರಣವಾದದ್ದು. ಹೊಸದಾಗಿ ಕೆಲಸಕ್ಕೆ ಸೇರಿದ ಗ್ರಾಮೀಣ ಮಹಿಳೆಯರಿಗೆ ಆರು ತಿಂಗಳವರೆಗೆ ಕೈಮಗ್ಗ, ಬಣ್ಣಗಾರಿಕೆ, ಕಸೂತಿ, ಹೊಲಿಗೆ ಇತ್ಯಾದಿ ಅವರವರ ಆಯ್ಕೆಯಂತೆ ತರಬೇತಿಯನ್ನು ನೀಡಲಾಗುತ್ತದೆ.**

– ಆರ್ನಂದನ್, ಯಲ್ಲಾಪುರ.

ಸಂಘ ಜೀವಿಯಾದ ಮನುಷ್ಯ ಸಂಘಟನೆಗಳಿಂದ ಸಂಸ್ಥೆಗಳಿಂದ ವೈಯಕ್ತಿಕ ಪ್ರಯೋಜನಗಳನ್ನು ನೋಡುತ್ತಿರುವ ಇಂದಿನ ಜಾಗತಿಕರಣದ ಯುಗದಲ್ಲಿ ಸಹಕಾರ ಕ್ಷೇತ್ರದ ಪ್ರಯತ್ನಗಳು ಎಲೆಮರೆಯಿಂದ ಇಣುಕುವ ಬೆಳಕ ರೇಖೆಗಳಾಗಿವೆ. ಭಾರತದ ಗ್ರಾಮೀಣ ಭಾಗದ ಮಹಿಳೆಯರಿಗೆ ಸ್ವಾವಲಂಬನೆಯ ಸಾಧ್ಯತೆಗಳನ್ನು ತೋರಿಸುತ್ತಾ, ಕೃಷಿಯಿಂದ ಬಿಡುವಿನ ಸಂದರ್ಭದಲ್ಲಿ ಸಾಮಾಜಿಕ ಅಭಿವೃದ್ಧಿಗೆ ಕೊಡುಗೆ ನೀಡುವಂತೆ ಪುರುಷರಿಗೆ ಪ್ರೇರೇಪಿಸುತ್ತಾ ಗ್ರಾಮೀಣಾಭಿವೃದ್ಧಿ ಸಾಧಿಸಲು ಸಹಕಾರ ಕ್ಷೇತ್ರ ತನ್ನೆಲ್ಲ ಮಿತಿಗಳಿಗಾಚೆಯೂ ಪ್ರಯತ್ನಿಸುತ್ತಿದೆ. ಗ್ರಾಮೀಣ ಭಾಗದಲ್ಲಿ ಉದ್ಯೋಗದೊಂದಿಗೆ ಆರ್ಥಿಕ ಶಿಸ್ತನ್ನು ರೂಢಿಸಿಕೊಳ್ಳಲು ಸಹಕರಿಸುತ್ತಾ, ಕೃಷಿಗೆ ಪರ್ಯಾಯವಾಗಿ ಹಾಗೂ ಪರಿಸರ ಸ್ನೇಹಿಯಾಗಿಯೂ ಕೆಲಸ ನಿರ್ವಹಿಸುತ್ತಿರುವ ಅನೇಕ ಸಹಕಾರ ಸಂಸ್ಥೆಗಳನ್ನ, ಸ್ವ ಸಹಾಯ ಸಂಘಗಳನ್ನು ಸಹಕಾರ ಕ್ಷೇತ್ರದಲ್ಲಿ ನೋಡಬಹುದಾಗಿದೆ. ಇವುಗಳಲ್ಲಿ ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಸಾಗರದ ಹೆಗ್ಗೋಡಿನಲ್ಲಿರುವ ಸಂಸ್ಥೆಯೇ "ಚರಕ".

ಮಲೆನಾಡಿನ ಜನರಿಗೆ ಕೃಷಿಗೆ ಪರ್ಯಾಯವಾದ ಹಾಗೂ ಪರಿಸರ ಸ್ನೇಹಿಯಾದ ಉದ್ಯೋಗವಕಾಶ ಕಲ್ಪಿಸಬೇಕೆಂಬ ಕನಸಿ ನೊಂದಿಗೆ 1994ರಲ್ಲಿ ಕವಿ–ಕಾವ್ಯ ಟ್ರಸ್ಟಿನ ಅಂಗಸಂಸ್ಥೆಯಾಗಿ ಆರಂಭವಾದ ಚರಕ ಗ್ರಾಮೋದ್ಯೋಗ ಘಟಕವು 1996ರ ಅಕ್ಟೋಬರ್ 04ರಂದು "ಚರಕ ಮಹಿಳಾ ವಿವಿದೋದ್ದೇಶ ಕೈಗಾರಿಕಾ ಸಹಕಾರ ಸಂಘ ನಿ., ಭೀಮನಕೋಣೆ" ಎಂಬ ಹೆಸರಿನಲ್ಲಿ ನೋಂದಾಯಿಸಲ್ಪಟ್ಟಿತು. ರಂಗಕರ್ಮಿ ಪ್ರಸನ್ನರವರ ಕನಸಿನ ಕೂಸಾಗಿ ಭೀಮನಕೋಣೆಯ ಪಾಳುಬಿದ್ದಿದ್ದ ಸರ್ಕಾರಿ ಕೈಗಾರಿಕಾ ಷೆಡ್ಡೊಂದನ್ನು ಆಗಿನ ಜನಪರ ಅಧಿಕಾರಿಗಳ ಸಹಾಯದೊಂದಿಗೆ ಸರ್ಕಾರಿ ಯೋಜನೆಯೊಂದರಡಿಯಲ್ಲಿಯೇ ಮಹಿಳೆಯರಿಗಾಗಿ ಹೊಲಿಗೆ ತರಬೇತಿ ಕೇಂದ್ರವೊಂದನ್ನು ತೆರೆಯುವ ಮೂಲಕ ಚರಕದ ಉದಯವಾಯಿತು. ಆರಂಭದಲ್ಲಿ ಕೇವಲ ಎರಡು ಕೈಮಗ್ಗ ಮತ್ತು ಎರಡು ಹೊಲಿಗೆ ಯಂತ್ರಗಳ ಮೂಲಕ ಆರಂಭವಾದ ಈ ಸಂಸ್ಥೆ ಪ್ರಸ್ತುತ 400ಕ್ಕೂ ಹೆಚ್ಚು ಜನರಿಗೆ ಕೆಲಸ ಒದಗಿಸಿರುವುದಲ್ಲದೇ ರಾಜ್ಯದ ಹಲವೆಡೆ ಮಾರಾಟ ಕೇಂದ್ರಗಳನ್ನೂ ಆರಂಭಿಸಿದೆ. ಚರಕ ಸಂಸ್ಥೆ ಕೇವಲ ನೇಯ್ಗೆ ಘಟಕ ಮಾತ್ರವಾಗಿರದೆ ನೂಲಿಗೆ ಬಣ್ಣ ಹಾಕುವುದು, ಬ್ಲಾಕ್ ಪ್ರಿಂಟಿಂಗ್, ಸ್ಕ್ರೀನ್ ಪ್ರಿಂಟಿಂಗ್, ಹೊಲಿಗೆ, ಕಸೂತಿ, ಮಗ್ಗ ತಯಾರಿಕೆ, ತರಬೇತಿ, ವಿನ್ಯಾಸ ಹೀಗೆ ಹಲವಾರು ಕೌಶಲ್ಯಗಳನ್ನೊಳಗೊಂಡ ಸಂಕೀರ್ಣ ಘಟಕವಾಗಿದೆ. ಗಂಡಸರ ಉಡುಪುಗಳು, ಮಹಿಳೆಯರ ಸಿದ್ಧ ಉಡುಪುಗಳು ಚೂಡಿದಾರ, ಕೌದಿ, ಡಿಸೈನ್ ಪೈಲ್, ಬೆಡ್‌ಸ್ಪ್ರೆಡ್ ಮೊದಲಾದ 159ಕ್ಕೂ ಹೆಚ್ಚು ಉತ್ಪನ್ನಗಳನ್ನು ಇಂದು ಚರಕ ತಯಾರಿಸುತ್ತಿದೆ. ಚರಕದ ಉಡುಪುಗಳು ಇಂದು ರಾಷ್ಟ್ರಮಟ್ಟದಲ್ಲಿ ಹೆಸರುವಾಸಿಯಾಗಿದೆ.

ಪರಿಸರಕ್ಕೆ ಹಾನಿಯಿಲ್ಲದ ನೈಸರ್ಗಿಕ ಬಣ್ಣಗಾರಿಕೆಯ ಪಾರಂಪರಿಕ ತಂತ್ರಜ್ಞಾನವನ್ನು ಪುನರುಜ್ಜೀವನಗೊಳಿಸಿ ಉಳಿಸುತ್ತಿರುವುದು ಚರಕದ



ವಿಶೇಷ. ಚರಕ ತನ್ನದೇ ಆದ ಬಣ್ಣದ ಮನೆಯನ್ನು ಹೊಂದಿದ್ದು ಎರಡು ಪ್ರತ್ಯೇಕ ಘಟಕಗಳಲ್ಲಿ ಕಚ್ಚಾ ರೂಪದ ನೂಲಿಗೆ ಬಣ್ಣ ಹಾಕಲು ಅನುಕೂಲಕರ ವ್ಯವಸ್ಥೆಯನ್ನು ಹೊಂದಿದೆ. ಅಡಿಕೆ ಚೊಗರು, ಅಳಲೆಕಾಯಿ, ದಾಳಿಂಬೆ ಸಿಪ್ಪೆ, ರಂಗಮಾಲೆ ಬೀಜ, ಅಂಟುವಾಳ, ಶೀಗೆ ಮುಂತಾದ ಸ್ಥಳೀಯವಾದ ಕಾಡು ಉತ್ಪನ್ನಗಳನ್ನು ಇಲ್ಲಿ ಬಣ್ಣಗಾರಿಕೆಗಾಗಿ ಬಳಸಲಾಗುತ್ತದೆ.

ಪಾರಂಪರಿಕ ನೇಕಾರಿಕೆ ಇಲ್ಲದ ಮಲೆನಾಡಿನಲ್ಲಿ ಸ್ಥಳೀಯ ಮಹಿಳೆಯರ ಶ್ರಮದಿಂದ ಬೆಳೆದ ಚರಕದ ಸಾಧನೆ ಅಸಾಧಾರಣವಾದದ್ದು. ಹೊಸದಾಗಿ ಕೆಲಸಕ್ಕೆ ಸೇರಿದ ಗ್ರಾಮೀಣ ಮಹಿಳೆಯರಿಗೆ ಆರು ತಿಂಗಳವರೆಗೆ ಕೈಮಗ್ಗ, ಬಣ್ಣಗಾರಿಕೆ, ಕಸೂತಿ, ಹೊಲಿಗೆ ಇತ್ಯಾದಿ ಅವರವರ ಆಯ್ಕೆಯಂತೆ ತರಬೇತಿಯನ್ನು ನೀಡಲಾಗುತ್ತದೆ. ಅಗತ್ಯವೆನಿಸಿದಾಗ ನಗರದ ವಸ್ತ್ರವಿನ್ಯಾಸಗಾರರನ್ನು ಕರೆಸಿಯೂ ತರಬೇತಿ ಒದಗಿಸಲಾಗುತ್ತದೆ. ಹೊಲಿಗೆ, ವಿನ್ಯಾಸ, ಆಡಳಿತ, ಹಣಕಾಸು ಎಲ್ಲವನ್ನೂ ಸ್ಥಳೀಯರೇ, ಹೆಚ್ಚಾಗಿ ಗ್ರಾಮೀಣ ಮಹಿಳೆಯರೇ ನಿರ್ವಹಿಸುತ್ತಿದ್ದಾರೆ. ದುಡಿಮೆಗೆ ತಕ್ಕಂತೆ ಸಂಭಾವನೆಯನ್ನು ನೀಡಲಾಗುತ್ತದೆಯಲ್ಲದೆ ಬೋನಸ್, ಪಿಎಫ್ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗಿದೆ. ಅಲ್ಲದೆ ಮಹಿಳೆಯರೇ ಹೆಚ್ಚಾಗಿರುವ ಕಾರಣ ಅನುಕೂಲ ಒದಗಿಸುವ ದೃಷ್ಠಿಯಿಂದ ಐದು ವರ್ಷಗಳ ಒಳಗಿನ ಮಕ್ಕಳಿಗಾಗಿ ಜೆ ಪಿ ರಾಜರತ್ನಂ ಹೆಸರಿನ ಬೇಬಿ ಘಟಕವನ್ನು ನಿರ್ವಹಿಸಲಾಗುತ್ತಿದೆ. ಕೆಲಸಗಾರರ ಜ್ಞಾನಾಭಿವೃದ್ಧಿಗಾಗಿ ಗ್ರಂಥಾಲಯ ಹಾಗೂ ಊಟದ ವ್ಯವಸ್ಥೆಗಾಗಿ ಕಡಿಮೆ ದರದ ಕ್ಯಾಂಟೀನ್ ಘಟಕವನ್ನು ಕೂಡ ನಿರ್ವಹಿಸಲಾಗುತ್ತಿದೆ.

ಇಲ್ಲಿ ವಿದ್ಯುತ್ ಚಾಲಿತ ಯಂತ್ರಗಳ ಬಳಕೆಯಿಲ್ಲ, ಮಣ್ಣಿನ ಗೋಡೆ ಹಾಗೂ ಹಂಚಿನ ಮನೆಗಳ ಕಡೆಗೆ ಚರಕಕ್ಕೆ ಒಲವು, ದಟ್ಟ ಮಳೆಯ ಮಲೆನಾಡಿನಲ್ಲೂ ಮಳೆ ನೀರನ್ನು ಸಂಗ್ರಹಿಸುವ ಮೂಲಕ ನೀರಿನಡೆಗೆ ಜಾಗೃತಿಯನ್ನು ಹೊಂದಿದೆ. ಅಂತರ್ಜಲ ಹೆಚ್ಚಿಸುವುದಕ್ಕಾಗಿ ಇಂಗುಗುಂಡಿಗಳನ್ನು ತೋಡಿಸಲಾಗಿದೆಯಲ್ಲದೆ, ಕೊಳವೆ ಬಾವಿಗಳ ಬದಲು ತೆರೆದ ಬಾವಿಗೆ ಆದ್ಯತೆ ನೀಡಲಾಗಿದೆ. ಇಂಧನ ಉಳಿತಾಯಕ್ಕಾಗಿ ಬಣ್ಣದ ಮನೆಗೆ ಮಲೆನಾಡಿನ ವಿಶೇಷ ಅಸ್ತ್ರ ಒಲೆಗಳನ್ನು ನಿರ್ಮಿಸಲಾಗಿದೆ. ಪಾರಂಪರಿಕ ಕಲೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲೂ ಚರಕದ ಪಾತ್ರ ಮಹತ್ವವಾದದ್ದು.

# ಸ್ವಾಭಿಮಾನಿ ಸಹಕಾರಿಯ ಬಗ್ಗೆ ಅನಿಸಿಕೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಹೊರತರುತ್ತಿರುವ ಸ್ವಾಭಿಮಾನಿ ಸಹಕಾರಿ ಪತ್ರಿಕೆಯು ಆಯಾ ತಿಂಗಳಲ್ಲಿ ಬರುವ ಎಲ್ಲಾ ದಿನಾಚರಣೆಯ ಚಿತ್ರಣದೊಂದಿಗೆ ಶುಭಾಷಯ ಹಾಗೂ ಆಯಾ ತಿಂಗಳಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಿದವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ ಸಹಕಾರ ರಂಗದ ವಿಷಯವನ್ನಲ್ಲದೇ ಸಹಕರಿಯೇತರ ವಿಷಯವನ್ನು ಪ್ರಕಟಿಸುತ್ತಿರುವುದು ತುಂಬ ಸಂತೋಷ. ಅದೇ ರೀತಿ ಸಹಕಾರಿಯೇತರ ವಿಷಯಗಳ ಬಗ್ಗೆ ಹೆಚ್ಚು ವಿಷಯಗಳು ಮೂಡಿ ಬರಲಿ ಎಂದು ಆಶಿಸುತ್ತೇವೆ.

– ಬಾಳೇಶ ವಿ. ಹಲಕರ್ಣಿ

ಮೇ ತಿಂಗಳ ಸ್ವಾಭಿಮಾನಿ ಸಹಕಾರಿ ಮಾಸಿಕ ಪತ್ರಿಕೆ ಮುಖಪುಟ ನೋಡಿ ತುಂಬಾ ಸಂತೋಷವಾಯಿತು. ಬೇಂದ್ರೆ ಪ್ರಕೃತಿಯ ಕಾವ್ಯನಾಮ ಮುಖ ಪುಟಕ್ಕೆ ತುಂಬಾ ಸೂಕ್ತವಾಗಿದೆ. ಸೌಹಾರ್ದ ಸಹಕಾರಿಗಳು 2000 ಸಂಖ್ಯೆ ದಾಟಿದ್ದು ಸಹಕಾರಿ ಚಳುವಳಿಯಲ್ಲಿ ಒಂದು ಮೈಲುಗಲ್ಲು. ಸಹಕಾರಿಯ ವೆಬ್ ಸೈಟ್ ಪರಿಚಯ ಓದಿ ತುಂಬಾ ಆನಂದವಾಯಿತು ಮತ್ತು ಸಹಕಾರಿಗಳಲ್ಲಿ ಸಿಬಿಎಸ್ ಬ್ಯಾಂಕಿಂಗ್ ವ್ಯವಸ್ಥೆ ಅತಿ ಶೀಘ್ರದಲ್ಲಿ ಆಗಲಿಯೆಂದು ಎದುರು ನೋಡುತ್ತೇವೆ.

ಸಾಲ ಮತ್ತು ಮುಂಗಡ, ವಿಧಾನಗಳು ತುಂಬಾ ಉಪಯುಕ್ತ. ಶ್ರೀ ಕೆ.ಎಂ.ರೇವಣ್ಣನವರ ಪ್ರಕೃತಿ ವರ್ಣನೆ ಮತ್ತು ಸಹಬಾಳ್ವೆ ಲೇಖನ ಚೆನ್ನಾಗಿ ಮೂಡಿಬಂದಿದೆ. ಶ್ರೀ ವೆಂಕಟೇಶ ಅವರು ಬರೆದ ಸಹಕಾರಿ ಕ್ಷೇತ್ರದ ಶಕ್ತಿ, ದುರ್ಬಲತೆ, ಅವಕಾಶಗಳು ಮತ್ತು ಸವಾಲುಗಳ ಲೇಖನ ಸರಳ ಮತ್ತು ವಿಚಾರಶೀಲವಾಗಿದೆ. ಇನ್ನಿತರ ವಿಷಯಗಳಾದ ಷೇರುಪೇಟೆ, ಚಿನ್ನದ ದಾಖಲೆ, ಪಟ್ಟಣ ಸಹಕಾರಿ ಬ್ಯಾಂಕುಗಳು ರೂ.25.00 ಲಕ್ಷ ಗೃಹಸಾಲ ನೀಡುವ ಆರ್.ಬಿ. ಐ ಅನುಮತಿ, ಮತ್ತು ಆರ್‌ಬಿಐ ರೆಪೊ ದರ ಇಳಿಕೆ ದಿನ ನಿತ್ಯದ ವ್ಯವಹಾರಕ್ಕೆ ತುಂಬಾ ಉಪಯುಕ್ತವಾಗಿವೆ.

ಸಹಕಾರಿಗಳ ಪರವಾಗಿ ಸಹಕಾರಿ ಪ್ರಕಟಣಾ ಬಳಗಕ್ಕೆ ಶುಭಾಶಯಗಳು, ಪತ್ರಿಕೆ ಇನ್ನೂ ಉತ್ತಮವಾದ ವಿಚಾರಗಳಿಂದ ಮೂಡಿಬರಲಿ.

– ಕೆ. ಗುರುರಾವ್ ವಿಶ್ವಾಸ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಗಂಗಾವತಿ

ರಾಜ್ಯದ ಎಲ್ಲಾ ವರ್ಗದ ಸಹಕಾರಿಗಳಿಗೆ ಒಂದು ವಿಭಿನ್ನವಾದ ಅತ್ಯುತ್ತಮವಾದ ದಾರಿದೀಪ. ಸ್ವಾಭಿಮಾನಿ ಸಹಕಾರಿಯ ಪತ್ರಿಕೆಯನ್ನು ಪ್ರತಿ ಮಾಸಿಕವಾಗಿ ನಾವು ಗಮನಿಸಿದಲ್ಲಿ ಸಹಕಾರಿಯ ಬಗ್ಗೆ ಬಹಳವಾದ ವಿಚಾರವನ್ನು ತಿಳಿದುಕೊಳ್ಳಬಹುದು. ಇದರಿಂದ ಸಹಕಾರಿಯು ಬಲಶಾಲಿಯಾಗಲಿದೆ. ನಾವು ಸಹ ಬುದ್ಧಿವಂತರಾಗುತ್ತೇವೆ ಸಹಕಾರಿಯಲ್ಲಿಯ ನಿಯಮಗಳಿಗೆ ನಾವು ಒಂದು ರೀತಿಯ ರೂಪವನ್ನು ತುಂಬುವುದರಿಂದ ಸಹಕಾರಿಯನ್ನು ಇನ್ನು ಹೆಚ್ಚಿನ ಸ್ಥಾನಕ್ಕೆ ಹೋಗುವಂತೆ ಮಾಡುತ್ತೇವೆ. ಇದರಿಂದ ಸಹಕಾರಿಗೆ ಅಷ್ಟೇ ಅಲ್ಲ ಎಲ್ಲಾ ಜನಾಂಗದವರಿಗೂ ಸಹ ಸ್ವಾಭಿಮಾನಿ ಸಹಕಾರಿ ಪತ್ರಿಕೆಯು ಬಹಳ ಅನುಕೂಲವಾಗಿದೆ. ನಮ್ಮ ಈ ಸ್ವಾಭಿಮಾನಿ ಸಹಕಾರಿಗೆ ಜಯವಾಗಲಿ ಮಾನ್ಯ ಸಂಪಾದಕರಿಗೆ ಎಲ್ಲಾ ಕನ್ನಡ ಜನತೆಯ ಪರವಾಗಿ ಅಭಿನಂದನೆಗಳು ಇನ್ನೂ ಹೆಚ್ಚು ಹೆಚ್ಚು ವಿಷಯಗಳನ್ನು ನಮ್ಮ ಜನತೆಗೆ ನೀವು ತಿಳಿಸಿ ನಿಮಗೆ ಶುಭವಾಗಲಿ "ಸ್ವಾಭಿಮಾನಿ ಸಹಕಾರಿಯು ಸಹಕಾರಿಗೆ ಇಂದು ಧ್ರುವತಾರೆ ಇದ್ದಂತೆ" ಇದರಿಂದ ಸಹಕಾರಿಯು ಅತ್ಯುತ್ತಮಗೊಳ್ಳಲಿ. – ಶಿವರಾಜ, ಗದಗ.




ಜೂನ್ ತಿಂಗಳ ಸಂಚಿಕೆಯಲ್ಲಿ ಕರ್ನಾಟಕದ ಸಹಕಾರಿ ವ್ಯವಸ್ಥೆ ದೇಶಕ್ಕೇ ಮಾದರಿ ಎಂದು ಕೇಂದ್ರದ ಮಾಜಿ ಸಚಿವ ಶ್ರೀ ಸುರೇಶ್ ಪ್ರಭು ಅವರು ಹೇಳಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯ. ಸಾರ್ವಜನಿಕರ ಠೇವಣಿ ದುರುಪಯೋಗ ಸಲ್ಲದು ಎಂದು ಸಂಯುಕ್ತ ಸಹಕಾರಿ ಅಧ್ಯಕ್ಷ ಶ್ರೀ ಎಸ್. ಆರ್. ಸತೀಶ್‌ಚಂದ್ರ ಅವರು ಜನರನ್ನು ಎಚ್ಚರಿಸಿರುವುದು ಸಕಾಲಿಕವಾಗಿದೆ. ಒಟ್ಟಾರೆ ಸಂಚಿಕೆ ಉತ್ತಮವಾದ ಲೇಖನಗಳಿಂದ ಅಂದವಾಗಿ ಬರುತ್ತಿದೆ.

– ಎಂ.ರಾಜಣ್ಣ, ತಿಪಟೂರು.

## ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕಿಗೆ ರೂ. 43.11 ಲಕ್ಷ ಲಾಭ

ಹೊಸದುರ್ಗ ನಗರದ ಶ್ರೀ ಸೀತಾರಾಘವ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.,ವು 2011–12ನೇ ಸಾಲಿಗೆ 43.44 ಲಕ್ಷ ಲಾಭ ಗಳಿಸಿ, ಎನ್.ಪಿ.ಎ. ಪ್ರಮಾಣ ಶೂನ್ಯವಾಗಿರುತ್ತದೆ. ಬ್ಯಾಂಕಿನ ದುಡಿಯುವ ಬಂಡವಾಳವು ರೂ. 19.53 ಕೋಟಿ ಸಾಲ ಮುಂಗಡಗಳನ್ನು ನೀಡಿರುತ್ತದೆ.

ಬ್ಯಾಂಕ್ ಚಿಕ್ಕಮಗಳೂರು ಜಿಲ್ಲೆ ಕಡೂರು ಪಟ್ಟಣದಲ್ಲಿ ಒಂದು ಸುಸಜ್ಜಿತ ಶಾಖೆಯನ್ನು ಹೊಂದಿದ್ದು, ಅಲ್ಲಿಯೂ ಗ್ರಾಹಕರು ಹಾಗೂ ಸದಸ್ಯರುಗಳಿಗೆ ಉತ್ತಮ ಬ್ಯಾಂಕಿಂಗ್ ಸೇವೆ ಸಲ್ಲಿಸಿ ಮೊದಲ ವಾರ್ಷಿಕದಲ್ಲಿ ಉತ್ತಮ ವಹಿವಾಟು ನಡೆಸಿ ಲಾಭ ಗಳಿಸಿರುತ್ತದೆಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಹಂಜಿ ಶಿವಸ್ವಾಮಿಯವರು ತಿಳಿಸಿದ್ದಾರೆ.


## ಪಿ.ಬಿ.ಮಡಿವಾಳ ಅವರಿಗೆ ಬೀಳ್ಕೊಡುಗೆ

ಚಿಕ್ಕೇರೂರು ಪತ್ತಿನ ಸೌಹಾರ್ದ ಸಹಕಾರಿ ನಿ. ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸಿಬ್ಬಂದಿಯವರು 39 ವರ್ಷ ಸೇವೆಸಲ್ಲಿಸಿ ನಿವೃತ್ತಿಯಾದ ಶ್ರೀ ಪಿ.ಬಿ. ಮಡಿವಾಳ, ವ್ಯವಸ್ಥಾಪಕರಿಗೆ ಸಹಕಾರಿಯ ವತಿಯಿಂದ ಸನ್ಮಾನಿಸುವುದರೊಂದಿಗೆ ಬೀಳ್ಕೊಟ್ಟರು.

# ಹಲವು ಸಮಸ್ಯೆಗಳ ಮಧ್ಯದಲ್ಲಿಯೂ ಸಂಯುಕ್ತ ಸಹಕಾರಿಯ ಕಾರ್ಯನಿರ್ವಹಣೆ ಪ್ರಶಂಸನೀಯ




**ಪ್ರಸ್ತುತ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ಬಗ್ಗೆ ಚಿಂತಿಸಬೇಕಾದರೆ ಒಂದು ದಶಕದಲ್ಲಿ 2125 ಕ್ಕಿಂತಲೂ ಹೆಚ್ಚು ಸೌಹಾರ್ದ ಸಹಕಾರಿಗಳು ನಮ್ಮ ರಾಜ್ಯದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಸಹಕಾರ ಕ್ಷೇತ್ರದಲ್ಲಿ ಒಂದು ಹೊಸ ಅಲೆಯನ್ನು ಎಬ್ಬಿಸಿವೆ.ಸರಕಾರದ ಹಾಗೂ ಸಾರ್ವಜನಿಕರ ಮೆಚ್ಚುಗೆಯನ್ನು ಪಡೆದಿವೆ. ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಹಾಗೂ ಎಲ್ಲ ತಾಲ್ಲೂಕುಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲೂ ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿದೆ.**



– ಡಾ.ನಂದೀಶ ಹಿರೇಮಠ
ಆಡಳಿತ ಸಲಹೆಗಾರ ಹಾಗೂ ತರಬೇತಿದಾರ.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಈಗ ಹನ್ನೆರಡು ವರ್ಷ. ಈ ಚಳುವಳಿಯ ನೇತಾರನಾಗಿ ಕಾರ್ಯನಿರ್ವಹಿಸುತ್ತಿರುವ ಸಂಯುಕ್ತ ಸಹಕಾರಿಗೆ ಈಗ 10 ವರ್ಷ. ಈ ಒಂದು ದಶಕದ ಸಾಧನೆಯ ಅಧ್ಯಯನ ಮಾಡಿದ ಸಂದರ್ಭದಲ್ಲಿ ನನ್ನ ಕೆಲವು ಅನಿಸಿಕೆಗಳನ್ನು ಸೌಹಾರ್ದ ಸಹಕಾರಿಗಳಲ್ಲಿ ಹಂಚಿಕೊಳ್ಳಲು ಬಯಸುತ್ತೇನೆ.

ಈ ದೇಶದ ಹಾಗೂ ಕರ್ನಾಟಕದ ಸಹಕಾರಿ ಕ್ಷೇತ್ರಕ್ಕೆ 107 ವರ್ಷಗಳು ಕಳೆದಿವೆ. ಸಹಕಾರಿ ಚಳುವಳಿಯ ಒಟ್ಟಾರೆ ಸಾಧನೆಯನ್ನು ಗಮನಿಸುವುದಾದರೆ ಪ್ರಪಂಚದ ಅತಿ ದೊಡ್ಡ ಸಹಕಾರಿ ಚಳುವಳಿ ನಮ್ಮ ದೇಶದಲ್ಲಿದೆ. ಗುಣಮಟ್ಟದಲ್ಲಿ ಹಾಗೂ ಸಂಖ್ಯಾಬಲದಲ್ಲಿ ಬೇರೆ ಯಾವದೇಶಗಳು ಸಾಧಿಸಲಸಾಧ್ಯವಾದುದನ್ನು ನಮ್ಮ ದೇಶದ ಸಹಕಾರಿ ಚಳುವಳಿ ಸಾಧಿಸಿದೆ. ಅದಕ್ಕಾಗಿ ಈ ಕ್ಷೇತ್ರವನ್ನು ಹುಟ್ಟುಹಾಕಿದ ನಮ್ಮ ಹಿರಿಯ ಸಹಕಾರಿ ನಾಯಕರಿಗೆಲ್ಲ ನಾವು ಕೃತಜ್ಞತೆಗಳನ್ನು ಸಲ್ಲಿಸುವುದು ನಮ್ಮ ಕರ್ತವ್ಯ.

ಪ್ರಸ್ತುತ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ಬಗ್ಗೆ ಚಿಂತಿಸಬೇಕಾದರೆ ಒಂದು ದಶಕದಲ್ಲಿ 2125 ಕ್ಕಿಂತಲೂ ಹೆಚ್ಚು ಸೌಹಾರ್ದ ಸಹಕಾರಿಗಳು ನಮ್ಮ ರಾಜ್ಯದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಸಹಕಾರ ಕ್ಷೇತ್ರದಲ್ಲಿ ಒಂದು ಹೊಸ ಅಲೆಯನ್ನು ಎಬ್ಬಿಸಿವೆ.ಸರಕಾರದ ಹಾಗೂ ಸಾರ್ವಜನಿಕರ ಮೆಚ್ಚುಗೆಯನ್ನು ಪಡೆದಿವೆ. ಕರ್ನಾಟಕದ ಎಲ್ಲ ಜಿಲ್ಲೆಗಳನ್ನು ಮತ್ತು ಗ್ರಾಮಾಂತರ ಪ್ರದೇಶಗಳಲ್ಲೂ ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿರುವುದು ಈ ವ್ಯವಸ್ಥೆ ಇಷ್ಟು ಬೇಗನೆ ತನ್ನ ಜಾಲವನ್ನು ಹರಡಿರುವುದು ಈ ಕ್ಷೇತ್ರದ ನೇತಾರನಾಗಿರುವ ಸಂಯುಕ್ತ ಸಹಕಾರಿಯ ಉತ್ತಮ ಕಾರ್ಯನಿರ್ವಹಣೆಯ ಫಲಿತಾಂಶವೆಂದು ವ್ಯಾಖ್ಯಾನಿಸಬಹುದು.

ಸಂಯುಕ್ತ ಸಹಕಾರಿಯ ಕಾರ್ಯನಿರ್ವಹಣೆ ಇತರೆ ಸಹಕಾರಿ ಮಹಾಮಂಡಳಗಳಿಗಿಂತಲೂ ವಿಭಿನ್ನವಾಗಿದೆ. ಪಾರದರ್ಶಕ, ವೃತ್ತಿಪರಿಣಿತ ಆಡಳಿತ ವ್ಯವಸ್ಥೆ ಹಾಗೂ ಈ ಕ್ಷೇತ್ರಕ್ಕಿರುವ ಸ್ವಾಯತ್ತತೆ ವ್ಯವಹಾರಿಕ ಸ್ವಾತಂತ್ರ ಇದಕ್ಕೆ ಕಾರಣ ಎಂದು ವಿಶ್ಲೇಷಿಸಬಹುದು. ಸಂಯುಕ್ತ ಸಹಕಾರಿಯು ತನ್ನ ಸಾಮರ್ಥ್ಯವನ್ನು ಪೂರ್ಣಪ್ರಮಾಣದಲ್ಲಿ ಬಳಸಿಕೊಳ್ಳಲು ಉತ್ತಮ ಅವಕಾಶಗಳಿವೆ. ಅವುಗಳನ್ನೆಲ್ಲ ಬಳಸಿಕೊಂಡು ತನ್ನ ಬೆಳವಣಿಗೆಯ ವೇಗವನ್ನು ಹೆಚ್ಚಿಸಿಕೊಳ್ಳಲು ಅವಕಾಶವಿದೆ.

ಸೌಹಾರ್ದ ಸಹಕಾರಿಗಳು ಸಾಂಪ್ರದಾಯಿಕ ಸಾಲಕೊಡುವ ಹಾಗು ಸಾಲ ವಸೂಲಾತಿಗೆ ಅಂಟಿಕೊಳ್ಳದೆ ಬಡ್ಡಿಯೇತರ ಆದಾಯಗಳಿಗೆ ಹೆಚ್ಚು ಒತ್ತು ಕೊಡುತ್ತಿರುವ ಹಾಗೂ ಸೌಹಾರ್ದ ಸಹಕಾರಿಗಳು ಉತ್ತಮ ಆರ್ಥಿಕ ಸಂಘಟನೆಗಳಾಗಿ ಸಮಾಜಮುಖಿಯಾಗಿ ಅರ್ಥ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ಕಾರ್ಯನಿರ್ವಹಿಸಲು ಪ್ರೇರೇಪಿಸುವಲ್ಲಿ ಸಂಯುಕ್ತ ಸಹಕಾರಿಯ ನಿರಂತರ ಪ್ರಯತ್ನ ಪ್ರಶಂಸನೀಯ. ಪರಿಣಾಮವಾಗಿ ಸೌಹಾರ್ದ ಸಹಕಾರಿಗಳು ಉತ್ತಮ ವ್ಯವಹಾರ ನಿರ್ವಹಿಸಲು ಸಾಧ್ಯವಾಗುತ್ತಿದೆ. ಸೌಹಾರ್ದ ಸಹಕಾರಿಗಳ ಮೂಲಕ ರಾಜ್ಯಾದ್ಯಂತ 456 'ಇ' ಸ್ಟಾಂಪಿಂಗ್ ಕೇಂದ್ರಗಳ ಮೂಲಕ ವ್ಯವಹಾರ ಮಾಡುತ್ತಿರುವುದು ಒಂದು ಉತ್ತಮ ನಿದರ್ಶನವಾಗಿದೆ.

ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳುತ್ತಿರುವ ತರಬೇತಿ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿವೆ. ಉತ್ತಮ ವಿಷಯಗಳ ಹಾಗೂ. ಗುಣಮಟ್ಟದ ಸಂಪನ್ಮೂಲ ವ್ಯಕ್ತಿಗಳ ಆಯ್ಕೆಯಿದೆ. ಸಂಯುಕ್ತ ಸಹಕಾರಿಯ ಪಧಾಧಿಕಾಗಳ ಹಾಗೂ ಅಧಿಕಾರಿಗಳ ಸಾರ್ವಜನಿಕ ಸಂಪರ್ಕ ಕಾರ್ಯಕ್ರಮಗಳ ನಿರ್ವಹಣೆ ಮತ್ತು ಕ್ಷೇತ್ರಗಳ ಆಯ್ಕೆ ಉತ್ತಮ ಮಟ್ಟದ್ದಾಗಿದೆ. ಪತ್ರಿಕೆ ಉತ್ತಮ ಗುಣಮಟ್ಟದ್ದಾಗಿದೆ. ಗುಣಮಟ್ಟ ಹೆಚ್ಚಿಸಲು ಇನ್ನೂ ಅವಕಾಶವಿದೆ.

ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯಲ್ಲಿ ಸಂಯುಕ್ತ ಸಹಕಾರಿಯ ಕಾರ್ಯನಿರ್ವಹಣೆಯ ಜೊತೆಗೆ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಸಹಯೋಗ ಚೆನ್ನಾಗಿದೆ. ಅದು ಮುಂದುವರಿಯಬೇಕು.

# "ಅಲ್ಪಾವಧಿಯಲ್ಲಿಯೇ ಉತ್ತಮ ಕಾರ್ಯ, ಸಾಧನೆಗೈದ ತುಮಕೂರು ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿಮಿಟೆಡ್"

ದಿ: 30/4/2006 ರಂದು 1054 ಸದಸ್ಯರೊಂದಿಗೆ ತುಮಕೂರು, ಬೆಂಗಳೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಕಾರ್ಯ ವ್ಯಾಪ್ತಿಯೊಂದಿಗೆ ಪ್ರಾರಂಭಗೊಂಡ "ಈ ಸಂಸ್ಥೆ ಇಂದು ಹೆಚ್ಚಿನ ಸದಸ್ಯರು ಹಾಗೂ ಗ್ರಾಹಕರನ್ನು ಹೊಂದಿದೆ". ಪರಮ ಪೂಜ್ಯ ಡಾ|| ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಯವರು, ಮಠಾಧ್ಯಕ್ಷರು, ಶ್ರೀ ಸಿದ್ಧಗಂಗಾ ಮಠ ಇವರ ಶುಭಾಶೀರ್ವಾದಗಳೊಂದಿಗೆ ಕಾರ್ಯ ನಿರ್ವಹಿಸುತ್ತಿದೆ.

ಸಹಕಾರಿಯು ಪ್ರಧಾನ ಕಛೇರಿಯ ಶಾಖೆ ಸಹಿತ ಒಟ್ಟು ಐದು ಶಾಖೆಗಳನ್ನು ಹೊಂದಿದ್ದು, ಈ ಎಲ್ಲಾ ಶಾಖೆಗಳಲ್ಲಿ ಅತ್ಯಾಧುನಿಕ ತಾಂತ್ರಿಕ ಸೇವೆಯನ್ನು ಅಳವಡಿಸಿಕೊಂಡಿದೆ. ಸಹಕಾರಿಯ ಎಲ್ಲ ಶಾಖೆಗಳು ಗಣಕೀಕೃತ ಹೊಂದಿ ಲಾಕರ್ಸ್, ಇ-ಸ್ಟಾಂಪಿಂಗ್, ಇ-ತೆರಿಗೆ ಪಾವತಿ, ಇ-ವ್ಯಾಟ್ ಪಾವತಿ, ಆರ್.ಟಿ.ಜಿ.ಎಸ್, ಎನ್.ಇ.ಎಫ್.ಟಿ, ಮೊಬೈಲ್ ಬ್ಯಾಂಕಿಂಗ್,



ಶ್ರೀ ಎನ್.ಎಸ್ ಜಯಕುಮಾರ್

ವೆಸ್ಟರ್ನ್ ಯೂನಿಯನ್ ಮನಿ ಟ್ರಾನ್ಸ್‌ಫರ್ ಮುಂತಾದ ಎಲ್ಲ ಸೌಲಭ್ಯಗಳನ್ನು ಗ್ರಾಹಕರಿಗೆ ಒದಗಿಸಿದೆ.

**ಅಂತರಾಷ್ಟ್ರೀಯ ಪ್ರಶಸ್ತಿ** : ಬ್ರಿಟೀಷ್ ಸರ್ಟಿಫಿ ಕೇಷನ್ಸ್ ಇನ್‌ಕಾರ್ಪೋರೇಶನ್ ಈ ಸಂಸ್ಥೆಗೆ ISO 9001:2008 ಸರ್ಟಿಫಿಕೇಟ್‌ನ್ನು ನೀಡಿರುವುದು ಸಂಸ್ಥೆಗೆ ಒಂದು ಕಳಶ ಪ್ರಾಯವಾಗಿದೆ. ಶ್ರೀ ಪಿ.ಎನ್.ರಮೇಶ್‌ರವರು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಸಂಸ್ಥೆಯಲ್ಲಿ 36 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

**ಆಡಳಿತ ಮಂಡಳಿ** : ಸಂಸ್ಥೆಯು ಸಹಕಾರಿ ತತ್ವಗಳಿಗೆ ಬದ್ಧತೆಯುಳ್ಳ ಹಾಗೂ ಅನುಭವಿ 15 ಸದಸ್ಯರುಗಳ ಆಡಳಿತ ಮಂಡಳಿ ಹೊಂದಿದ್ದು, ಅಧ್ಯಕ್ಷರಾಗಿ ಶ್ರೀ ಎನ್.ಎಸ್. ಜಯಕುಮಾರ್ ಮತ್ತು ಉಪಾಧ್ಯಕ್ಷರಾಗಿ ಶ್ರೀ ಟಿ.ಎ. ಶ್ರೀಕರ ಇವರು ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ಜಿ.ವಿ.ವಾಸುದೇವ್‌ರವರು ಸಂಸ್ಥೆಯ ಲೆಕ್ಕಪರಿಶೋಧಕರಾಗಿರುತ್ತಾರೆ.

ಒಂದು ಸಹಕಾರಿ ಸಂಸ್ಥೆ ಅಲ್ಪಾವಧಿಯ ಲ್ಲಿಯೇ ಉತ್ತುಂಗಕ್ಕೆ ಏರಬೇಕಾದರೆ ಅನುಭವಿ ಆಡಳಿತ ಮಂಡಳಿ, ಪ್ರಭಾವಿ ಸಾರಥ್ಯ ಹಾಗೂ ಬದ್ಧತೆಯುಳ್ಳ ಸಿಬ್ಬಂದಿ ವರ್ಗ ಇವು ಅತಿ ಅವಶ್ಯ. ತುಮಕೂರು ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಈ ಎಲ್ಲ ಉತ್ತಮ ಆಸ್ತಿಗಳನ್ನು ತನ್ನದಾಗಿಸಿಕೊಂಡು ಪ್ರಗತಿಯ ಮಜಲನ್ನು ದಾಟುತ್ತಾ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಒಂದು ಅಭೂತಪೂರ್ವ ಸಾಧನೆ ಶ್ಲಾಘನೀಯ.

**– ಶಂಕರ ಹೆಗಡೆ, ತುಮಕೂರು.**




ದಿನಾಂಕ : 06-07-2012ರಂದು ಬೀದರ್‌ನಲ್ಲಿ ನಡೆದ "ಅಧಿಪ್ರೇರಣೆ ಮತ್ತು ಗುಣಮಟ್ಟ ನಿರ್ವಹಣೆ" ತರಬೇತಿ ಕಾರ್ಯಕ್ರಮದ ಉದ್ಘಾಟನೆಯಲ್ಲಿ ರಾಜ್ಯ ಸಹಕಾರ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಉಮಾಕಾಂತ ನಾಗಮಾರಪಲ್ಲಿ, ಸಂಯುಕ್ತ ಸಹಕಾರಿ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ್, ಶ್ರೀ ನಾರಾಯಣರಾವ್ ಮನ್ನಳ್ಳಿ ಅವರು ಇದ್ದಾರೆ.

# ಅಹಂಕಾರ ತೊರೆದಾಗಲೇ ಸಂತೃಪ್ತಿ ಜೀವನ

ಜಗತ್ತಿನ 84 ಲಕ್ಷ ಜೀವಜಂತುಗಳಲ್ಲಿ ಅಹಂಕಾರ ಆವರಿಸಿಕೊಂಡು ಬದುಕುತ್ತಿರುವುದು ಕೇವಲ ಮನುಷ್ಯ ಮಾತ್ರ ಅವನ ಸುಖ ದು:ಖಗಳು ಸಮಸ್ಯೆಗಳು ಹಾಗೂ ಕಷ್ಟಗಳಿಗೆ ಮೂಲಕಾರಣ ನಾನು ಎಂಬ ಅಹಂಕಾರ, ಒಬ್ಬ ವ್ಯಕ್ತಿ ನಮ್ಮನ್ನು ಹೊಗಳಿದಾಗ "ಇದು ನನಗಲ್ಲ" ಎಂದು ಭಾವಿಸಿದರೆ ನಮಗೆ ಸಂತೋಷವಾಗುವುದಿಲ್ಲ ಅದೇವ್ಯಕ್ತಿ ನಿಂದಿಸಿದಾಗಲೂ "ಇದು ನನಗಲ್ಲ" ಎಂದು ಭಾವನೆ ಬಂದರೆ ನಮಗೆ ದು:ಖವು ಆಗುವುದಿಲ್ಲ ಒಂದು ವೇಳೆ "ನಾನು" ಎಂಬುವುದು ಶೂನ್ಯವಾದಾಗ ಮನುಷ್ಯನ ಎಲ್ಲಾ ಕಷ್ಟಗಳು ಮಾಯವಾಗುತ್ತವೆ. ಅಹಂಕಾರವೊಂದಿಲ್ಲದಿದ್ದರೆ ಯಾವ ಧರ್ಮ ಗ್ರಂಥವನ್ನು ಓದದೆ,ಯಾವ ಮಂದಿರವನ್ನು ಪ್ರವೇಶಿಸದೆ ಮೋಕ್ಷ ಪಡೆಯಬಹುದು ಎಂಬುದಾಗಿ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರು ಹೇಳಿದ್ದಾರೆ,

ಮನುಷ್ಯ ಎಷ್ಟೇ ಒಳ್ಳೆಯ ಕೆಲಸವನ್ನು ಮಾಡಿರಬಹುದು,ಆತ ಎಷ್ಟೇ ಸರಳ ಸಜ್ಜನನಿರಬಹುದು ಆತ ಎಲ್ಲವನ್ನು ತ್ಯಾಗ ಮಾಡಿರಬಹುದು ಆದರೆ ಅಹಂಕಾರವನ್ನು ತ್ಯಜಿಸದೆ ಇದ್ದರೆ ಎಲ್ಲವೂ ವ್ಯರ್ಥ, ಅಹಂಕಾರ ಎಂಬುವುದು ಕುರೂಪ.ಸುಂದರವಾಗಿರಲು ಸಾಧ್ಯವೇ ಇಲ್ಲ, ಯಾರಲ್ಲಿ ಅಹಂಕಾರ ಇಲ್ಲವಾಗುವುದೋ ಅವರಲ್ಲಿ ಮಾತ್ರ ಸೌಂದರ್ಯ ಉಂಟಾಗುತ್ತದೆ ಅಂತಹ ಸೌಂದರ್ಯ 'ಇದ್ದಾಗ ಮಾತ್ರ ಮನುಷ್ಯನ ಕಲ್ಯಾಣವಾಗುವುದು, ವಿಶ್ವದ ಯಾವುದೇ ಅಹಂಕಾರಿಯು ಇದುವರೆಗೂ ಅಹಂಕಾರ ಸುಂದರವಾಗಿದೆಯೆಂದೂ ತನಗಿದರಿಂದ ಮಹತ್ತರ ಆನಂದ ದೊರೆತಿದೆಯೆಂದೂ ಹೇಳಿಲ್ಲ, ಎಲ್ಲ ಅಹಂಕಾರಿಗಳು ಆಶಾಭಂಗ ಹೊಂದಿ ನಿರಾಶೆಯಲ್ಲಿಯೇ ಸತ್ತಿದ್ದಾರೆ'. ಏಕೆಂದರೆ ಅಹಂಕಾರಕ್ಕೆ ಮಿತಿಯೆಂಬುವುದು ಇಲ್ಲ, ಅಹಂಕಾರಿ ಸದಾ ಅತೃಪ್ತ ಆದುದರಿಂದ ಅಹಂಕಾರಿ ಯಾವಾಗಲೂ ನಿರಾಶನಾಗಿಯೇ ಇರುತ್ತಾನೆ. ಅಹಂಕಾರ ಅಳಿದಾಗಲೇ ನಿಜವಾದ ಆನಂದ ಸಿಗುವುದು.



– ಸೂರ್ಯಕಾಂತ ರ‍್ಯಾಕಲೆ
ಅಧಿಕಾರಿ, ಕ.ರಾ.ಸೌ.ಸ.ಸಹಕಾರಿ ನಿ.
ಬೆಳಗಾವಿ ವಿಭಾಗೀಯ ಕಛೇರಿ.

ಒಂದು ದೇಶದಲ್ಲಿ ಒಬ್ಬ ರಾಜನಿದ್ದನು .ಅವನು ಧರ್ಮವಂತನೂ ದಾನಶೀಲನೂ ಆಗಿದ್ದನು. ಒಂದು ದಿನ ರಾಜಭವನಕ್ಕೆ ಒಬ್ಬ ತಪಸ್ವಿಯು ಬಂದನು. ರಾಜನಿಗೆ ಬಹಳ ಸಂತೋಷವಾಗಿ ನಾನೂ ನಿಮಗೆ ಅತ್ಯಮೂಲ್ಯವಾದ ಏನಾದರೂ ಉಡಗೊರೆ ಕೊಡಬೇಕೆಂದಿದ್ದೇನೆ ಏನನ್ನು ಕೊಡಲಿ ಎಂದು ಕೇಳಿದನು.

ತಪಸ್ವಿಯು ಹೇಳಿದನು– ನಿನ್ನ ಅತ್ಯಂತ ಪ್ರಿಯವಾದ ವಸ್ತುವನ್ನು ನನಗೆ ಕೊಡು. ತಕ್ಷಣವೇ ರಾಜನು ಹೇಳಿದನು ನಾನು ಇಡೀ ರಾಜ್ಯ ಕೋಶವನ್ನು ನಿಮಗೆ ಸಮರ್ಪಿಸುತ್ತೇನೆ.ಅದೆಲ್ಲಾ ಪ್ರಜೆಗಳದ್ದು ನಿನ್ನದಲ್ಲ ನೀನಾದರೂ ಅದರ ರಕ್ಷಣೆಯನ್ನು ಮಾತ್ರ ಮಾಡುತ್ತಿದ್ದೀಯೆ ಎಂದರು ತಪಸ್ವಿ. ಹಾಗಾದರೆ ಅರಮನೆ, ರಥ ಕುದುರೆಗಳಾದಿಯಾಗಿ ಎಲ್ಲವನ್ನೂ ಕೊಡುತ್ತೇನೆ ಅದೆಲ್ಲ ನನ್ನದೇ ರಾಜ ಹೇಳಿದ. ತಪಸ್ವಿಯು ನಗುತ್ತಾ– ಅವೆಲ್ಲವೂ ಪ್ರಜೆಗಳದ್ದೇ ಎಂಬುದನ್ನು ರಾಜನಾದ ನೀನು ಮರೆತುಬಿಟ್ಟಿದ್ದೀಯ ನಿನ್ನ ಕೆಲಸಗಳಿಗೆ ಅನುಕೂಲವಾಗುವುದಕ್ಕಾಗಿಯೇ ಅವರು ನಿನಗೆ ಕೊಟ್ಟಿದ್ದಾರೆ.

ಹಾಗಾದರೆ ನನ್ನ ಶರೀರವನ್ನೇ ಕೊಡುವೆ. ಅದು ನನ್ನದೆಂದು ಒಪ್ಪಿಕೊಳ್ಳುತ್ತೀರಲ್ಲವೇ ಎಂದು ಕೇಳಿದನು ರಾಜ.ಅದು ನಿನ್ನದಲ್ಲ ಅದು ನಿನ್ನ ತಂದೆ ತಾಯಿ ಕೊಟ್ಟದ್ದು ಅದರ ಮೇಲೆ ನಿನ್ನ ಮಕ್ಕಳ ಅಧಿಕಾರ ವಿರುತ್ತದೆ, ನಿನ್ನದಲ್ಲವೆಂದು ತಪಸ್ವಿಯು ಹೇಳಿದರು. ರಾಜನೂ ವಿಸ್ಮಯದಿಂದ ಮೂಕನಾದನು ಮುಂದೆ ಏನು ಹೇಳ ಬೇಕೆಂಬುದೇ ಅವನಿಗೆ ತಿಳಿಯಲಿಲ್ಲ. ಆಗ ತಪಸ್ವಿಯು ಎಲೈ ರಾಜನೇ ನಿನ್ನ ಮನಸ್ಸಿನಲ್ಲಿ ಅಹಂಕಾರವೆಂಬುದೊಂದಿದೆ. ಅದು ಸಂಪೂರ್ಣ ನಿನ್ನದೇ ಅದನ್ನು ದಾನವಾಗಿ ಕೊಡು.ರಾಜನಿಗೆ ತನ್ನ ತಪ್ಪಿನ ಅರಿವಾಯಿತು ರಾಜನು ಮಾರನೆಯ ದಿನದಿಂದಲೇ ಯಾವುದರಲ್ಲೂ ಗರ್ವಪಡದೆ ವಿನಮ್ರನಾಗಿ ಇದ್ದು ಯೋಗಿಯಂತೆ ರಾಜ್ಯವನ್ನಾಳಿದನು. ಅಹಂಕಾರವೇ ಎಲ್ಲ ರೀತಿಯ ಬಂಧನಕ್ಕೂ ಕಾರಣವಾಗಿದೆ ಮನುಷ್ಯನಿಗೆ ಅಹಂಪ್ರಜ್ಞೆ ಇರಬೇಕೇ ಹೊರತು ಅಹಂಕಾರ ಇರಬಾರದು. ಅಹಂಕಾರ ಬಂಧನದ ಕಡೆಗೆ ಸಾಗಿದರೆ ಅಹಂಪ್ರಜ್ಞೆ ಮುಕ್ತಿಯ ಕಡೆಗೆ ಸಾಗುತ್ತದೆ. ಆದರಿಂದ ನಾನು ಎಂಬ ಅಹಂಕಾರ ಬಿಡಲು ಪ್ರಯತ್ನಿಸೋಣ.

## ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ ತರಬೇತಿ ಕಾರ್ಯಕ್ರಮ

ಮಾನ್ವಿಯಲ್ಲಿ 2–7–2012 ರಂದು ನಡೆದ ಕಾರ್ಯಕ್ರಮದ ಸಾನಿಧ್ಯವನ್ನು ಪೂಜ್ಯ ಶ್ರೀ ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಿದ್ದರು, ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ, ಇವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಶ್ರೀ ಸುಭಾಷ್ ರೆಡ್ಡಿ, ಅಧ್ಯಕ್ಷರು, ಜಿಲ್ಲಾ ಸಹಕಾರಿ ಯೂನಿಯನ್, ರಾಯಚೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಮಂಜುಳಾ ಪಾಟೀಲ್, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು, ಶ್ರೀ ವಿಶ್ವನಾಥ ಪಾಟೀಲ್, ಅಧ್ಯಕ್ಷರು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ರಾಯಚೂರು, ಶ್ರೀ ರಾಜಶೇಖರ್ ಮತ್ತು ಶ್ರೀ ತಿಮ್ಮಾರೆಡ್ಡಿಯವರು ಭಾಗವಹಿಸಿದ್ದರು. ಕಾರ್ಯಕ್ರಮದ ಅತಿಥಿಗಳನ್ನು ಶ್ರೀ ಸಂಜಯ ಕೋರಟಕರ ಸ್ವಾಗತಿಸಿದರೆ ಶ್ರೀ ರಾಜಶೇಖರ ರವರು ವಂದಿಸಿದರು, ಕಾರ್ಯಕ್ರಮವನ್ನು ಶ್ರೀಮತಿ ಅನ್ನಪೂರ್ಣ ಹೇಮವಾಡಗಿ ನಿರೂಪಿಸಿದರು.



ಈ ಕಾರ್ಯಕ್ರಮದಲ್ಲಿ 38 ಸೌಹಾರ್ದ ಸಹಕಾರಿಗಳ 56 ಜನ ಪ್ರತಿನಿಧಿಗಳು ಮತ್ತು 9 ಸಹಕಾರಿ ಸಂಘಗಳ 10 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

# ಗುಲ್ಬರ್ಗಾದಲ್ಲಿ ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣಾ ತರಬೇತಿ ಕಾರ್ಯಾಗಾರ

## ಸಹಕಾರ ಕ್ಷೇತ್ರದಲ್ಲಿ ಯುವಕರಿಗೆ ಅವಕಾಶ ಅಗತ್ಯ - ಶ್ರೀ ಗುರುನಾಥ ಜ್ಯಾಂತೀಕರ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ಕ್ರೆಡಿಟ್ ಕೋ–ಆಪರೇಟೀವ್ ಸೊಸೈಟೀಸ್ ಅಸೋಸಿಯೇಷನ್ ಹಾಗೂ ಗುಲ್ಬರ್ಗಾ ಜಿಲ್ಲಾ ಸಹಕಾರ ಯೂನಿಯನ್ ಇವುಗಳ ಸಹಯೋಗದೊಂದಿಗೆ ದಿನಾಂಕ : 26–06–2012ರ ಮಂಗಳವಾರದಂದು ಗುಲ್ಬರ್ಗಾ ಜಿಲ್ಲೆಯ ಸೌಹಾರ್ದ ಸಹಕಾರಿಗಳು ಹಾಗೂ ಪತ್ತಿನ ಸಹಕಾರ ಸಂಘಗಳಿಗಾಗಿ ಒಂದು ದಿನದ "ಅಧಿಪ್ರೇರಣೆ ಮತ್ತು ಗುಣಮಟ್ಟ ನಿರ್ವಹಣೆ" ಈ ವಿಷಯದ ಕುರಿತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ ಇವರು ಉದ್ಘಾಟನೆ ಯನ್ನು ನೆರವೇರಿಸುವುದರೊಂದಿಗೆ ಕಾರ್ಯಕ್ರಮ ವನ್ನು ಆರಂಭಿಸಲಾಯಿತು.

ಶ್ರೀಯುತರು ಉದ್ಘಾಟನೆ ನೆರವೇರಿಸಿ ಮಾತನಾಡುತ್ತಾ ಸಹಕಾರ ಕ್ಷೇತ್ರಕ್ಕೆ ಯುವಪೀಳಿಗೆ ಮುಂದೆ ಬರಬೇಕು, ಹಿರಿಯರು ಹಿಂದೆ ನಿಂತು ಮಾರ್ಗದರ್ಶನ ನೀಡಬೇಕು ಹಾಗೂ ಮುಂಚೂಣಿ ನಾಯಕರು ಆದರ್ಶವಾಗ ಬೇಕು ಎಂದು ಕರೆ ನೀಡಿದರು.

**ಜುಲೈ ಮಾಹೆಯಲ್ಲಿ ನಡೆಸಲಾಗುವ ತರಬೇತಿ ಕಾರ್ಯಕ್ರಮಗಳು**

**ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ**

| | |
|---|---|
| 02.07.2012 | ಮಾನ್ವಿ |
| 06.07.2012 | ಬೀದರ್ |
| 12.07.2012 | ತುಮಕೂರು |
| 13.07.2012 | ಕೋಲಾರ & ಚಿಕ್ಕಬಳ್ಳಾಪುರ |
| 18.07.2012 | ಬಿಜಾಪುರ |
| 19.07.2012 | ಬಾಗಲಕೋಟೆ |
| 25.07.2012 | ಕುಮಟಾ |



ಅಧಿಕಾರ ಸ್ಥರು ಸಹಕಾರ ಸಂಸ್ಥೆಯನ್ನು ತಮ್ಮ ಪರಂಪರೆಯ ಆಸ್ತಿ ಮಾಡಿಕೊಳ್ಳದೆ ಯುವ ಪೀಳಿಗೆಗೆ ಅವಕಾಶ ಕಲ್ಪಿಸಿದರೆ ಅಭಿವೃದ್ಧಿ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಸಂಯುಕ್ತ ಸಹಕಾರಿಯ ಗುಲ್ಬರ್ಗಾ ಜಿಲ್ಲಾ ನಿರ್ದೇಶಕರಾದ ಶ್ರೀ ಶಾಂತಿನಾಥ ಪಂಡಿತ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಯಾದಗಿರಿ ಜಿಲ್ಲೆಯ ನಿರ್ದೇಶಕರಾದ ಶ್ರೀ ವೈ.ಟಿ.ಪಾಟೀಲ್, ಕರ್ನಾಟಕ ರಾಜ್ಯ ಕ್ರೆಡಿಟ್ ಕೋ ಆಪರೇಟೀವ್ ಸೊಸೈಟೀಸ್ ಅಸೋಸಿಯೇಷನ್ ನಿರ್ದೇಶಕರಾದ ಶ್ರೀ ಪ್ರದೀಪ ದಾಬಶೆಟ್ಟಿ ಹಾಗೂ ಗುಲ್ಬರ್ಗಾ ಜಿಲ್ಲಾ ಸಹಕಾರ ಯೂನಿಯನ್‌ನ ಮುಖ್ಯಕಾರ್ಯನಿರ್ವಹಣಾಧಿಕಾರಿಯಾದ ಶೈಲಜಾ ಚವ್ಹಾಣ್ ಉಪಸ್ಥಿತರಿದ್ದರು. ಸಂಯುಕ್ತ ಸಹಕಾರಿಯ ಗುಲ್ಬರ್ಗಾ ವಿಭಾಗೀಯ ಅಧಿಕಾರಿಯಾದ ಶ್ರೀ ಸಂಜಯ ಕೋರಟಕರರವರು ವಂದಿಸಿದರು.

ತರಬೇತಿ ಕಾರ್ಯಾಗಾರದಲ್ಲಿ "ಸಹಕಾರ ಕ್ಷೇತ್ರದ ಬೆಳವಣಿಗೆ, 1997ರ ಸೌಹಾರ್ದ ಸಹಕಾರ ಕಾಯ್ದೆಯ ಆಶಯ, ಮುಖ್ಯಾಂಶಗಳು, 1959ರ ಕಾಯ್ದೆ ಹಾಗೂ 1997ರ ಕಾಯ್ದೆಗೆ ಇರುವ ವ್ಯತ್ಯಾಸಗಳು" – ಈ ವಿಷಯಗಳ ಕುರಿತು ಶ್ರೀ ಎ ಎಸ್ ಕುದುರಿ, ನಿವೃತ್ತ ಸಹಾಯಕ ಸಹಕಾರ ಶಿಕ್ಷಣಾಧಿಕಾರಿಗಳು, ಗುಲ್ಬರ್ಗಾ ಇವರು ಮಾಹಿತಿ ನೀಡಿದರು. "ಸಹಕಾರಿ ಸಂಸ್ಥೆಗಳ ಗುಣಮಟ್ಟ ನಿರ್ವಹಣೆಯಲ್ಲಿ ಪದಾಧಿಕಾರಿಗಳ ಪಾತ್ರ" ಎಂಬ ವಿಷಯದ ಬಗ್ಗೆ ಶ್ರೀ ಎಮ್. ಬಿ. ಬಾಳಿಗೇರಿ, ನಿವೃತ್ತ ಪ್ರಾಂಶುಪಾಲರು, ಸಹಕಾರಿ ತರಬೇತಿ ಕೇಂದ್ರ, ಗುಲ್ಬರ್ಗಾ ಇವರು ಉಪನ್ಯಾಸ ನೀಡಿದರು.

"ವೃತ್ತಿ ಪರತೆ ಮತ್ತು ಸಂಘದ ಆಂತರಿಕ ಹಾಗೂ ಸಾರ್ವಜನಿಕ ಸಂಬಂಧಗಳು" ಎಂಬ ವಿಷಯದ ಬಗ್ಗೆ ಶ್ರೀ ಡಾ. ಗುರುಬಸಪ್ಪ, ಸಹ ಪ್ರಾಧ್ಯಾಪಕರು, ಸರ್ಕಾರಿ ಮಹಾವಿದ್ಯಾಲಯ, ಗುಲ್ಬರ್ಗಾ ಇವರು ಉಪನ್ಯಾಸ ನೀಡಿದರು.

ಈ ತರಬೇತಿಯಲ್ಲಿ 48 ಸೌಹಾರ್ದ ಸಹಕಾರಿಗಳ 75 ಜನ ಪ್ರತಿನಿಧಿಗಳು ಮತ್ತು 9 ಸಹಕಾರಿ ಸಂಘಗಳ 15 ಜನ ಪ್ರತಿನಿಧಿಗಳು ಸೇರಿದಂತೆ ಒಟ್ಟು 90ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.

– **ಸಂಜಯ ಕೋರಟಕರ,** ಗುಲ್ಬರ್ಗಾ ವಿಭಾಗಾಧಿಕಾರಿ, ಕರಾಸೌಸಂಸನಿ, ಬೆಂಗಳೂರು.

## ಸಾಗರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆ

# "ನಗು ಮುಖದ ಸೇವೆ ಗ್ರಾಹಕರೊಂದಿಗೆ ನಿರಂತರ ಸಂಪರ್ಕ - ಅಭಿವೃದ್ಧಿಯ ಸಂಕೇತ" - ಶ್ರೀ ಎಸ್ ಆರ್ ಸತೀಶಚಂದ್ರ






ದಿನಾಂಕ : 17.06.2012, ರವಿವಾರದಂದು ಸಾಗರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಸಂಪರ್ಕ ಸಭೆಯನ್ನು ಸಾಗರ ತಾಲ್ಲೂಕಿನ ಹೆಗ್ಗೋಡಿನ ನೀನಾಸಂನಲ್ಲಿ ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ಸಾಗರ ತಾಲ್ಲೂಕಿನಲ್ಲಿರುವ 11 ಸೌಹಾರ್ದ ಸಹಕಾರಿಗಳಲ್ಲಿ 07 ಸೌಹಾರ್ದ ಸಹಕಾರಿಗಳಿಂದ 14 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶಚಂದ್ರ, ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ ಹಾಗೂ ಶಿವಮೊಗ್ಗ ಜಿಲ್ಲಾ ನಿರ್ದೇಶಕರಾದ ಶ್ರೀ ಹೆಚ್ ವಿ ರವಿಕುಮಾರ್ ಸಂಪರ್ಕ ಸಭೆಯನ್ನು ನಡೆಸಿಕೊಟ್ಟರು. ಸಂಯುಕ್ತ ಸಹಕಾರಿಯಿಂದ ಬೆಂಗಳೂರು ವಿಭಾಗೀಯ ಅಧಿಕಾರಿ ಶ್ರೀ ರಘುನಂದನ ಕೆ. ಹಾಗೂ ತರಬೇತಿ ಅಧಿಕಾರಿ ಶ್ರೀ ವಿ ಜೆ ಕಾರಕೂನರವರು ಉಪಸ್ಥಿತರಿದ್ದರು.

ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶಚಂದ್ರ ಇವರು ಸಾಗರ ತಾಲ್ಲೂಕಿನ ಸೌಹಾರ್ದಗಳಿಂದ ಬಂದಿದ್ದ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ ಸಂಯುಕ್ತ ಸಹಕಾರಿಯು ಸಾಗರ ತಾಲ್ಲೂಕಿನ ಹೆಗ್ಗೋಡು ಇಲ್ಲಿಯ ನೀನಾಸಂನಲ್ಲಿ ಏರ್ಪಡಿಸಿರುವ 10 ದಿನಗಳ ತರಬೇತಿ ಶಿಬಿರಕ್ಕೆ ಸಂಪೂರ್ಣ ಸಹಕಾರದೊಂದಿಗೆ ಸೂಕ್ತ ವ್ಯವಸ್ಥೆ ಒದಗಿಸಿದ ಸಾಗರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಕೃತಜ್ಞತೆ/ಅಭಿನಂದನೆಯನ್ನು ಸಲ್ಲಿಸಿದರು. ಸಾಗರ ತಾಲ್ಲೂಕಿನ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿಯ ವಿಮರ್ಶೆ, ಸೌಹಾರ್ದ ಸಹಕಾರಿಗಳ ಕುರಿತು ಸಾರ್ವಜನಿಕರ ಅಭಿಪ್ರಾಯ, ಕಾಯ್ದೆಯಲ್ಲಿನ ತೊಡಕುಗಳು, ಸೌಹಾರ್ದ ಸಹಕಾರ ಕ್ಷೇತ್ರದ ಅವಕಾಶಗಳ ಕುರಿತಂತೆ ಚರ್ಚಿಸುವುದು ಸಭೆಯ ಉದ್ದೇಶವೆಂದು ತಿಳಿಸಿದರು.

ಸಹಕಾರಿಯ ದಿನನಿತ್ಯದ ಕಾರ್ಯಾಚರಣೆಯಲ್ಲಿ ಹಲವು ಆಡಳಿತಾತ್ಮಕ ಹಾಗೂ ವ್ಯಾವಹಾರಿಕ ಗೊಂದಲಗಳು ಉಂಟಾಗುತ್ತಿವೆ, ಸಹಕಾರಿಯ ದೈನಂದಿನ ವ್ಯವಹಾರದಲ್ಲಿ ನಿರ್ದೇಶಕರ ಭಾಗವಹಿಸುವಿಕೆಯ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ಇಂತಹ ವಿಷಯಗಳ ಕುರಿತಂತೆ ಸಂಯುಕ್ತ ಸಹಕಾರಿಯ ಮಾರ್ಗದರ್ಶನದ ಅಗತ್ಯವಿದೆ ಎಂದು ಸಭೆ ಅಭಿಪ್ರಾಯಪಟ್ಟಿತು. ಸಹಕಾರ ಇಲಾಖೆಯೊಂದಿಗೆ ಸೌಹಾರ್ದಯುತ ವಾತಾವರಣ ಬೆಳೆಸಿಕೊಳ್ಳಲು ಸೌಹಾರ್ದ ಸಹಕಾರಿಗಳು ಪ್ರಯತ್ನಿಸುತ್ತಿವೆ ಆದಾಗ್ಯೂ ಕೆಲವು ಆಡಳಿತಾತ್ಮಕ ಹಾಗೂ ದಾವಾ ಪ್ರಕರಣಗಳಲ್ಲಿ ತೊಂದರೆಯಾಗುತ್ತಿರುವುದನ್ನು ಚರ್ಚಿಸಲಾಯಿತು.

ಸಾಗರ ತಾಲ್ಲೂಕಿನಲ್ಲಿ ಸಾಲ ಮರುಪಾವತಿಯಲ್ಲಿ ಹಾಗೂ ವಸೂಲಾತಿ ಯಲ್ಲಿ ತೊಂದರೆಗಳುಂಟಾಗುತ್ತಿರುವುದನ್ನು, ಗ್ರಾಹಕರೊಂದಿಗಿನ ಸಂಬಂಧ ಹಾಗೂ ಬಡ್ಡಿಯೇತರ ಆದಾಯದ ಕುರಿತಂತೆ ವಿಸ್ತೃತವಾಗಿ ಚರ್ಚಿಸಲಾಯಿತು.

ಸಭೆಯಲ್ಲಿ ಚರ್ಚಿಸಲ್ಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶಚಂದ್ರರವರು ಮಾತನಾಡುತ್ತಾ ತಮ್ಮ ಕೆಲವು ಅಭಿಪ್ರಾಯ ಹಾಗೂ ಅನುಭವಗಳನ್ನು ಸಭೆಯೊಂದಿಗೆ ಹಂಚಿಕೊಂಡರು. ಸೌಹಾರ್ದ ಸಹಕಾರಿಗಳು ಗುಣಾತ್ಮಕ ಸಾಲಗಳನ್ನು ನೀಡುವುದರ ಮೂಲಕ ಮತ್ತು ವಸೂಲಾತಿ ತರಬೇತಿ ಹೊಂದುವುದರ ಮೂಲಕ ಸಾಲಕ್ಕೆ ಸಂಬಂಧಿಸಿದ ತೊಂದರೆಗಳನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸಬೇಕಿದೆ. ಮೂರನೇ ವ್ಯಕ್ತಿ ನಗದೀಕರಣಕ್ಕೆ ಸಂಬಂಧಿಸಿದಂತೆ ಕೆವೈಸಿ ನಾರ್ಮ್ಸ್‌ಗಳನ್ನು ಕಡ್ಡಾಯವಾಗಿ ಪಾಲಿಸಬೇಕು, ಇದನ್ನು ರಾಜ್ಯದ ಕೆಲವು ಸೌಹಾರ್ದಗಳು ಗಂಭೀರವಾಗಿ ಪರಿಗಣಿಸುತ್ತಿಲ್ಲ, ನಿರಂತರ ಪ್ರಯತ್ನದ ಮೂಲಕ 50,000/–ದವರೆಗೆ ಅನುಮತಿ ಪಡೆಯಲಾಗಿದ್ದು, ಸೂಕ್ತವಾಗಿ ಕಾರ್ಯನಿರ್ವಹಿಸದಿದ್ದಲ್ಲಿ ಎಲ್ಲ ಸೌಹಾರ್ದಗಳಿಗೂ ತೊಂದರೆಗಳುಂಟಾಗುತ್ತದೆ, ಈ ಹಿನ್ನಲೆಯಲ್ಲಿ ಸೌಹಾರ್ದ ಸಹಕಾರಿಗಳು ಸೂಕ್ತ ಗಮನಹರಿಸಬೇಕಿದೆ. ಪ್ರತಿ ತಾಲ್ಲೂಕಿನಲ್ಲಿ ಸೌಹಾರ್ದ ಸಹಕಾರಿಗಳು ಸಹಕಾರ ಭಾವದೊಂದಿಗೆ ಸೇರಿ ಚರ್ಚಿಸಿ ಅನುಕೂಲವಾಗುವಂತೆ ಕಾನೂನು ಸಲಹೆಗಾರರರನ್ನು, ಮಾರಾಟಾಧಿಕಾರಿಗಳನ್ನು, ವಸೂಲಾಧಿಕಾರಿಗಳನ್ನು, ಸೀಸರ್‌ನನ್ನು ನೇಮಿಸಿಕೊಂಡಲ್ಲಿ ಅನೇಕ ವ್ಯಾವಹಾರಿಕ ಕಾರ್ಯಚಟುವಟಿಕೆಗಳು ಸುಗಮವಾಗುತ್ತದೆ ಎಂದರು.

ಅಲ್ಲದೆ ಶುಲ್ಕ ಆಧಾರಿತ ಅವಕಾಶಗಳು ಹಾಗೂ ಬಡ್ಡಿಯೇತರ ಆದಾಯಗಳಿಗೆ ಸಂಬಂಧಿಸಿದಂತೆ ಮಾತನಾಡುತ್ತಾ, ಕೆಲವು ಸೌಹಾರ್ದ ಸಹಕಾರಿಯಲ್ಲಿನ ದಲ್ಲಾಳಿ ಮಂಡಿ ಹಾಗೂ ಕಮೀಷನ್ ಆದಾಯದ ಮಾಹಿತಿ ನೀಡಿದರು. ಮನೆ, ಮಾರುಕಟ್ಟೆಗಳಿಗೆ ಹೋಗಿ ವಿವರ ಸಂಗ್ರಹಿಸಿಕೊಂಡು ಡಿಡಿ ತೆಗೆದು ಮನೆಮನೆಗೆ ತಲುಪಿಸುವ ಕಾರ್ಯ ಮಾಡುವ ಮೂಲಕ ಪ್ರತಿದಿನ ಕಮೀಷನ್ ಸಂಗ್ರಹಿಸುತ್ತ ಬಡ್ಡಿಯೇತರ ಆದಾಯವನ್ನು ಗಳಿಸುತ್ತಿರುವ ಸೌಹಾರ್ದಗಳ ಬಗ್ಗೆ, ಹಾರ್ಡ್‌ವೇರ್ ಷಾಪ್‌ಗಳನ್ನು ಕೂಡ ನಿರ್ವಹಿಸುತ್ತಿರುವ ಸಂಸ್ಥೆಗಳ ಬಗ್ಗೆ ಮಾಹಿತಿ ಒದಗಿಸಿದರು. ನಮ್ಮ ನಡುವಳಿಕೆಯ ಮೂಲಕ, ನಗು ಮುಖದ ಸೇವೆಯೊಂದಿಗೆ, ನಿರಂತರ ಸಂಪರ್ಕದಲ್ಲಿರುವ ಮೂಲಕ ಗ್ರಾಹಕರೊಂದಿಗೆ ಉತ್ತಮ ಸಂಬಂಧ ನಿರ್ವಹಿಸಿಕೊಳ್ಳಬೇಕು. ವರ್ಷಕ್ಕೊಮ್ಮೆಯಾದರೂ ಗ್ರಾಹಕರ ಸಮಾವೇಶವೂ ಸೇರಿದಂತೆ ಗ್ರಾಹಕರಿಗಾಗಿ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ಈ ಮೂಲಕ ಗ್ರಾಹಕರ ಮನೆ ಮನಗಳಿಗೆ ತಲುಪುವ ಕಾರ್ಯವಾಗಬೇಕು ಎಂದರು. ಸೌಹಾರ್ದ ಸಹಕಾರಿಗಳ ಬಡ್ಜೆಟ್ ಮಾಡುವ ವಿಧಾನ, ಏಪ್ರಿಲ್‌ನಲ್ಲೇ ಬಡ್ಜೆಟ್ ಮಾಡುವುದರ ಮೂಲಕ ಸಾಧಿಸಬಹುದಾದ ಪ್ರಗತಿ, ಪ್ರತಿ ತಿಂಗಳು ಬಡ್ಜೆಟ್ ಪುನರಾವಲೋಕನ, ಬಡ್ಜೆಟ್ ಮಾಡುವ ಸಂದರ್ಭದಲ್ಲಿ ಸಿಬ್ಬಂದಿ, ನಿರ್ದೇಶಕರ ಸಲಹೆಗಳನ್ನು ಪರಿಗಣಿಸುವುದು ಮುಂತಾದವುಗಳನ್ನು ತಿಳಿಸಿದರು.

## ಸದಸ್ಯರ ಉನ್ನತಿ ಗಮನದಲ್ಲಿರಬೇಕು – ಶ್ರೀ ಗುರುನಾಥ ಜ್ಯಾಂತೀಕರ

ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ ಇವರು ಮಾತನಾಡುತ್ತಾ ಸದಸ್ಯರೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇವೆಯೇ, ಸದಸ್ಯರೊಂದಿಗೆ ನಮ್ಮ ನಡುವಳಿಕೆಯ ವಿಧಾನ ಹೇಗಿದೆ, ಸದಸ್ಯರ ಬೇಕು ಬೇಡ ಗಳನ್ನು ಗಮನಿಸಿ ಕಾರ್ಯನಿರ್ವಹಿಸುತ್ತಿದ್ದೇವೆಯೇ, ಸದಸ್ಯರ ಒಳಿತಿಗಾಗಿ ಅಥವಾ ಉದ್ಧಾರಕ್ಕಾಗಿ ನಾವೇನು ಮಾಡಿದ್ದೇವೆ, ಸಹಕಾರ ತತ್ವ, ಉದ್ದೇಶಗಳನ್ನು ಮರೆಯುತ್ತಿದ್ದೇವೆಯೇ – ಇವುಗಳನ್ನೆಲ್ಲ ಪರಿಗಣಿಸಿ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸಬೇಕಾಗುತ್ತದೆ. ಸಹಕಾರ ಸಂಸ್ಥೆಗಳೆಂದರೆ ಲಾಭಕ್ಕಾಗಿ ಮಾತ್ರ ಕೆಲಸ ಮಾಡುವುದಲ್ಲ, ಲಾಭದೊಂದಿಗೆ ಸದಸ್ಯರ ಉನ್ನತಿಯತ್ತಲೂ ಗಮನಹರಿಸಬೇಕು, ಸಹಕಾರ ಚಳುವಳಿಯನ್ನು ಬೆಳೆಸಲು ಪ್ರಯತ್ನಿಸೋಣ ಎಂದರು. ಸಂಯುಕ್ತ ಸಹಕಾರಿಯ ಶಿವಮೊಗ್ಗ ಜಿಲ್ಲಾ ನಿರ್ದೇಶಕರಾದ ಶ್ರೀ ರವಿಕುಮಾರ್ ಸಭೆಯಲ್ಲಿ ಕೊನೆಯದಾಗಿ ಮಾತನಾಡುತ್ತಾ ಬಡ್ಡಿಯೇತರ ಆದಾಯಕ್ಕೆ ಸಂಬಂಧಿಸಿದಂತೆ ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯಲ್ಲಿರುವ ಅವಕಾಶಗಳ ಕುರಿತಂತೆ ಕೆಲವು ಉದಾಹರಣೆಗಳನ್ನು ನೀಡಿದರು. ಅಲ್ಲದೆ ತಾಲ್ಲೂಕಾ ಮಟ್ಟದಲ್ಲಿ ಸಂಪರ್ಕ ಸಭೆಗಳನ್ನು ಕರೆದು ಅಭಿವೃದ್ಧಿಯೆಡೆಗೆ ಹಾಗೂ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಕುರಿತು ಚರ್ಚಿಸುವ ಕಾರ್ಯವಾಗಬೇಕಿದೆ, ಸೌಹಾರ್ದ ಸಹಕಾರಿಗಳು ಈ ನಿಟ್ಟಿನಲ್ಲಿ ಸಹಕರಿಸಬೇಕು ಎಂದರು.

**– ರಘುನಂದನ ಕೆ., ಸಹಪ್ರಧಾನ ವ್ಯವಸ್ಥಾಪಕ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**

## ಸಂಯುಕ್ತ ಸಹಕಾರಿಯ ಸಿಬ್ಬಂದಿಗೆ ಕಛೇರಿ ಆಡಳಿತ ನಿರ್ವಹಣೆ ತರಬೇತಿ

ಜೂ. 9 ಮತ್ತು 10ರಂದು ಶಿವಮೊಗ್ಗದ, ಹೆಗ್ಗೋಡಿನ ನೀನಾಸಂನಲ್ಲಿ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗಾಗಿ “ಕಛೇರಿ ಆಡಳಿತ ನಿರ್ವಹಣೆ”ಯ ಬಗ್ಗೆ ತರಬೇತಿ ಏರ್ಪಡಿಸಲಾಗಿತ್ತು.

ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗೀಯ ಅಧಿಕಾರಿಯಾದ ಜಿ.ಎಸ್. ಟೋಪಣ್ಣನವರ್‌ರವರು ಸಹಕಾರಿಗಳ ಪರಿವೀಕ್ಷಣೆ – ಏಕೆ, ಹೇಗೆ, ವಿಧಾನಗಳಾವುವು ಎನ್ನುವುದರ ಕುರಿತು ವಿವರಿಸಿದರು. ಮಧ್ಯಾಹ್ನದ ಅವಧಿಯಲ್ಲಿ ಶ್ರೀಯುತ ಬಿ.ಎ. ಮಹದೇವಪ್ಪ, ಅಪರ ನಿಬಂಧಕರು, ಸಹಕಾರ ಇಲಾಖೆ, ಇವರು ಕಛೇರಿ ಆಂತರಿಕ ಆಡಳಿತ ಹಾಗೂ ಕಡತಗಳ ನಿರ್ವಹಣೆ ಕುರಿತು ಕಾರ್ಯಾಗಾರ ನಡೆಸಿದರು. ಅದರಲ್ಲಿ ಕಡತಗಳ ನಿರ್ವಹಣೆ, ಆಡಳಿತದ ಧ್ಯೇಯ, ನಾಯಕತ್ವದ ಗುಣಗಳು, ಸ್ಪಷ್ಟ ಸಂವಹನ ಇವುಗಳ ಕುರಿತು ಮಾಹಿತಿ ನೀಡಿದರು. ದೈನಂದಿನ ಕಛೇರಿ ವಾತಾವರಣದಲ್ಲಿ ಕೆಲಸ ನಿರ್ವಹಿಸುವ ಬಗೆಯನ್ನು ವ್ಯಕ್ತಿತ್ವ ವಿಕಸನದ ಅಂಶಗಳೊಂದಿಗೆ ತಿಳಿಯಪಡಿಸಿದರು.

ಕಾರ್ಯಾಗಾರದ ಭಾಗವಾಗಿ ಚರಕ ಮಹಿಳಾ ವಿವಿದೋದ್ದೇಶ ಕೈಗಾರಿಕಾ ಸಹಕಾರ ಸಂಘ ನಿ., ಭೀಮನಕೋಣೆ ಎನ್ನುವ ಸಂಸ್ಥೆಗೆ ಭೇಟಿ ನೀಡಲಾಯಿತು. ಪ್ರಾಯೋಗಿಕ ಅವಧಿ ಇದಾಗಿತ್ತು.

ಜೂ. 10ರಂದು ಬೆಳಗಿನ ಅವಧಿಯಲ್ಲಿ ಲೆಕ್ಕಪರಿಶೋಧಕರು ಹಾಗೂ ಸುವಿಧಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಸಾಗರ ಇದರ ಅಧ್ಯಕ್ಷರಾದ ಶ್ರೀಯುತ ಬಿ.ವಿ.ರವೀಂದ್ರನಾಥ್ ಇವರು “ಪರಿಣಾಮಕಾರಿ ವ್ಯಕ್ತಿತ್ವ”ದಲ್ಲಿ ಹಾಗೂ ತಂಡದಲ್ಲಿ ಕೆಲಸ ಮಾಡುವುದು, ಸಕಾರಾತ್ಮಕ ಪ್ರಭಾವ, ಸಪ್ತ ವರ್ತನೆಗಳು, ಕಛೇರಿಯಲ್ಲಿನ ವರ್ತನೆಗಳು ಇತ್ಯಾದಿಗಳ ಬಗ್ಗೆ ತಿಳಿಯಪಡಿಸಿದರು. ಭಾಸ್ಕರ ಹೆಗಡೆ ಕಾಗೇರಿಯವರು ಸಂವಾದ ಕಾರ್ಯ ಕ್ರಮವನ್ನು ನಡೆಸಿಕೊಟ್ಟರು.

ಇದೇ ಸಂದರ್ಭದಲ್ಲಿ ಸಾಗರದ ಸುವಿಧಾ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಸೂಪರ್ ಮಾರ್ಕೆಟ್ ಪರಿಕಲ್ಪನೆಯನ್ನು ಭೇಟಿ ನೀಡುವುದರ ಮೂಲಕ ಅಧ್ಯಯನ ನಡೆಸಲಾಯಿತು.

**– ಸೌಮ್ಯ ವಿ. & ಗೀತ ಎಂ. ಎಸ್.**

## ಸೌಹಾರ್ದ ಸಹಕಾರಿಗಳ ಗಮನಕ್ಕೆ

ರಾಜ್ಯದ ಸೌಹಾರ್ದ ಸಹಕಾರಿಗಳು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಕಾರಣಾಂತರದಿಂದ ರಾಜಿನಾಮೆ ಸಲ್ಲಿಸಿ ಕೆಸಲದಿಂದ ಬಿಡುಗಡೆಯಾಗಿದ್ದಲ್ಲಿ ಮತ್ತು ಹೊಸದಾಗಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ನೇಮಕ ಮಾಡಿಕೊಂಡಿದ್ದಲ್ಲಿ ಅಂತಹ ವಿವರಗಳನ್ನು ಅವರ ಮೊಬೈಲ್ ನಂಬರ್‌ನೊಂದಿಗೆ ಸಂಯುಕ್ತ ಸಹಕಾರಿಗೆ ತಿಳಿಸತಕ್ಕದ್ದು.

ಸಂಯುಕ್ತ ಸಹಕಾರಿಯ ಪದಾಧಿಕಾರಿಗಳ ಹಾಗೂ ರಾಜ್ಯದ ಅನೇಕ ಹಿರಿಯ ಸಹಕಾರಿಗಳ ಪ್ರಯತ್ನದಿಂದಾಗಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಇ–ಸ್ಟಾಂಪಿಂಗ್ ಸೌಲಭ್ಯ ಲಭಿಸಿದೆ. ಈ ಸೌಲಭ್ಯದಿಂದಾಗಿ ಸೌಹಾರ್ದ ಸಹಕಾರಿಗಳಿಗೆ ರಾಜ್ಯ ಸರ್ಕಾರದ ಅಧಿಕೃತ ಮನ್ನಣೆ ದೊರಕಿದಂತಾಗಿದೆ. ಎಲ್ಲವೂ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ. ಒಂದೆರೆಡು ಕೇಂದ್ರಗಳಲ್ಲಿ ಕಾರ್ಯನಿರ್ವಹಣೆಯಲ್ಲಿ ದೂರುಗಳು ಬಂದಿದ್ದು ಈ ದೂರುಗಳು ಬಾರದಂತೆ ಸೌಹಾರ್ದ ಸಹಕಾರಿಗಳು ಎಚ್ಚರಿಕೆ ವಹಿಸಿ, ಸಂಯುಕ್ತ ಸಹಕಾರಿ ಇ–ಸ್ಟಾಂಪಿಂಗ್ ಬಗೆಗೆ ಸೂಚಿಸಿದ ಮಾರ್ಗದಲ್ಲಿ ಕಾರ್ಯ ನಿರ್ವಹಿಸಲು ತಿಳಿಸಿದೆ.

**– ವ್ಯವಸ್ಥಾಪಕ ನಿರ್ದೇಶಕರು.**

# ಪರಿಣಾಮಕಾರಿ ಸಂವಹನ



– ಶ್ರೀ ಬಿ.ಎ. ಮಹದೇವಪ್ಪ
ಅಪರ ನಿಬಂಧಕರು.

**ನಮ್ಮ ದೈನಂದಿನ ಜೀವನದಲ್ಲಿ ಸಂವಹನದ ಅವಶ್ಯಕತೆ, ಸಂವಹನದ ವಿವಿಧ ರೂಪಗಳು, ಸಹಕಾರ ಸಂಘಗಳ ವ್ಯವಹಾರದಲ್ಲಿ ಸಂವಹನದ ಪ್ರಾಧ್ಯಾನತೆ – ಇವುಗಳನ್ನು ತಿಳಿಸುವುದು ಈ ಲೇಖನದ ಆಶಯವಾಗಿದೆ.**

ಸಂವಹನ ಎಂದರೆ "ಒಂದು ಕಡೆಯಿಂದ ಇನ್ನೊಂದು ಕಡೆಗೆ ಒಬ್ಬರಿಂದ ಮತ್ತೊಬ್ಬರಿಗೆ ವಿಷಯಗಳನ್ನು ತಿಳಿಸುವ ಮತ್ತು ತಿಳಿದುಕೊಳ್ಳುವ ಹಾಗೂ ಅದರಂತೆ ನಡೆದುಕೊಳ್ಳುವ ಪ್ರಕ್ರಿಯೆ". ಅಷ್ಟೇ ಅಲ್ಲದೆ ಸಂವಹನವೆಂದರೆ ನಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ಮತ್ತು ಬೇರೊಬ್ಬರನ್ನು ಅರ್ಥಮಾಡಿಕೊಳ್ಳುವ ಸಾಧನ. ಸಂವಹನ ಎನ್ನುವುದು ನಿಸರ್ಗದ ಅದ್ಭುತ ಕೊಡುಗೆ, ಅದು ಇಲ್ಲದಿದ್ದಲ್ಲಿ ಜೀವನ ಚಕ್ರ ಸ್ಥಗಿತವಾಗಿ ಬಿಡುತ್ತದೆ. ಭಾಷೆಯೇ ಇಲ್ಲದಿದ್ದಾಗ ನಮ್ಮ ಪೂರ್ವಜರು ಚಿತ್ರಗಳ ಮೂಲಕ, ಸಂಜ್ಞೆಯ ಮೂಲಕ, ಧ್ವನಿಯ ಮೂಲಕ ಸಂವಹನ ನಡೆಸುತ್ತಿದ್ದರು. ಶಿಶು ಜನ್ಮ ತಾಳುತ್ತಿದ್ದಂತೆಯೇ ಹಸಿವಾದಾಗ, ನಿದ್ರೆ ಬರುವಾಗ, ಅಳುವ ಮೂಲಕ ತಾಯಿಯ ಗಮನ ಸೆಳೆಯುತ್ತದೆ. ಮಾತಿನ ಅಗತ್ಯವಿಲ್ಲದೆಯೂ ಮಗು ತನ್ನ ನಗುವಿನ ಮೂಲಕ ಸಂತೋಷ ಹಂಚುತ್ತದೆ. ಪ್ರಾಣಿಗಳು ಕೂಡ ತಮ್ಮದೇ ಆದ ರೀತಿಯಲ್ಲಿ ಸಂವಹನ ನಡೆಸುತ್ತವೆ.

- ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿರುವ ಕರು 'ಅಂಬಾ' ಎಂದು ತಾಯಿಯನ್ನು ಕರೆಯುತ್ತದೆ. ಹಸು ಅದಕ್ಕೆ ಪ್ರತಿಕ್ರಿಯಿಸುತ್ತ ಕರುವಿನ ಕಡೆಗೆ ಬರುತ್ತದೆ.
- ಅಪಾಯದ ಸಂದರ್ಭದಲ್ಲಿ ಒಂದು ಪಕ್ಷಿಯು ನೆಲದಿಂದ ಮೇಲೆದ್ದು ಹಾರುತ್ತಾ, ಇತರೇ ಪಕ್ಷಿಗಳಿಗೆ "ನಾವಿನ್ನು ಹೋಗೋಣ" ಎನ್ನುತ್ತದೆ.
- ಕ್ರೂರ ಮೃಗವೊಂದು ಬರುವುದರ ಸುಳಿವರಿತು, ಪ್ರಾಣಿಯೊಂದು ಬೇರೆಯ ಪ್ರಾಣಿಗಳಿಗೂ ಸಂಕೇತ ನೀಡುತ್ತಾ ಓಡಲಾರಂಭಿಸುತ್ತದೆ.

ನಮ್ಮ ರೈತರು, ಉಳುವ ನೇಗಿಲ ಹಿಡಿದು ಮಳೆ ಬರುವ ಆಗಸದೊಂದಿಗೆ ಮಾತನಾಡುತ್ತಾರೆ. ಕವಿಗಳು ಪ್ರಕೃತಿಯೊಂದಿಗೆ ಸಂಭಾಷಿಸುತ್ತಾರೆ. ಓದುಗ ಪುಸ್ತಕದೊಂದಿಗೆ ಮಾತನಾಡುತ್ತಾನೆ. ಚಿಂತನೆ, ಆಲೋಚನೆ, ಧ್ಯಾನವೂ ಒಂದು ಸಂವಹನ. ಈ ತಾಂತ್ರಿಕ ಯುಗದಲ್ಲಿ ಸಂಸ್ಥೆಗಳಲ್ಲಿ ಕುಟುಂಬಗಳಲ್ಲಿ ಸಂವಹನಕ್ಕೆ ಎಲ್ಲಿಲ್ಲದ ಮಹತ್ವ ದೊರೆತಿದೆ. ಒಂದು ಸಂಸ್ಥೆಯನ್ನು ಕಟ್ಟುವುದು ಸುಲಭ, ಆದರೆ ಅದನ್ನು ಉತ್ತಮವಾಗಿ ನಿರ್ವಹಿಸುವುದು ಕಷ್ಟ. ಸಂಸ್ಥೆಯು ತನ್ನ ಉದ್ದೇಶಗಳನ್ನು ಈಡೇರಿಸಿಕೊಳ್ಳುವಲ್ಲಿ ವಿಫಲವಾದರೆ, ತನ್ನ ಗುರಿಯನ್ನು ಸಾಧಿಸಲಾಗದಿದ್ದರೆ ಅದಕ್ಕೆ ಸಂವಹನದ ಕೊರತೆ ಬಹುಪಾಲು ಕಾರಣವಾಗಿರುತ್ತದೆ. ಕುಟುಂಬದಲ್ಲಿ ಸಂವಹನ ತಂದೆ–ತಾಯಿ, ಮಕ್ಕಳ ನಡುವೆ ಸಂವಹನದ ಸರಪಳಿ ಮುಕ್ಕಾಗಿ ಕಡಿದು ಬಿದ್ದರೆ ಆ ಮನೆ ನರಕ ಸದೃಶ ಆಗಿಬಿಡಬಹುದು. ನಾಗರಿಕತೆಯ ಬೆಳವಣಿಗೆಯ ಹಾದಿಯಲ್ಲಿ ಮಾನವ ಸಂಬಂಧಗಳು ಗೌಣವಾಗುತ್ತಿವೆ.

ನಮ್ಮೆಲ್ಲರ ಸಂಬಂಧಗಳಲ್ಲಿ ಬಿರುಕು ಕಾಣುತ್ತಿದೆ
"ಹತ್ತಿರವಿದ್ದರೂ ದೂರ ನಿಲ್ಲುವೆವು ನಮ್ಮೀ ಹಮ್ಮಿನ ಕೋಟೆಯಲಿ
ಹೊಂದಿಕೆ ಎಂಬುದು ಎಷ್ಟು ಕಷ್ಟವೋ
ಮೂರು ದಿನದ ಈ ಬಾಳಿನಲಿ" ಎಂದಿದ್ದಾರೆ ಕವಿಗಳು.

ಈ ಮಾತುಗಳನ್ನು ನೀವು ಒಮ್ಮೆಯಾದರೂ ಕೇಳಿರಬೇಕಲ್ಲವೆ? ಏಕೆ, ಹೀಗೆ ?

- ಯಾರೂ ನನ್ನನ್ನು ಅರ್ಥಮಾಡಿಕೊಳ್ಳುತ್ತಿಲ್ಲ
- ನನ್ನ ಮಾತನ್ನು ಯಾರೂ ಕೇಳಿಸಿಕೊಳ್ಳುವುದಿಲ್ಲ.
- ನಿನಗೆ ಹೇಗೆ ಹೇಳಬೇಕೋ ನನಗಂತೂ ಗೊತ್ತಾಗ್ತಾ ಇಲ್ಲ.
- ನಾನು ಹೇಳಿದ್ದು ಆ ಅರ್ಥದಲ್ಲಿ ಅಲ್ಲ.
- ನನ್ನ ಮಾತು ಅಂದರೆ ನಿಮಗೆ ಅಷ್ಟೊಂದು ತಾತ್ಸಾರ !
- ನೀನು ಏನು ಹೇಳ್ಬೇಕೋ ಅದನ್ನು ಬೇಗ ಹೇಳಿ ಮುಗಿಸು.
- ಮೊದಲು ಅವನ ಬಾಯಿಗೆ ಒಂದು ಬೀಗ ಹಾಕ್ಬೇಕು.

ಸಂವಹನದ ಕೊರತೆಯೇ ಇದಕ್ಕೆಲ್ಲ ಮುಖ್ಯ ಕಾರಣ. "ಶಾಲಾ ಕಾಲೇಜುಗಳು ನಮಗೆ ಓದು ಬರಹ ಕಲಿಸುತ್ತವೆ. ಆದರೆ ನಮ್ಮ ಭಾವನೆಗಳನ್ನು ಇತರರಿಗೆ ಸ್ಪಷ್ಟವಾಗಿ ತಿಳಿಸಿ ಹೇಳುವ ಹಂಚಿಕೊಳ್ಳುವ ಕಲೆಯನ್ನು ಕಲಿಸಿಲ್ಲ" ಎಂದಿದ್ದಾರೆ ಭಾರತ ರತ್ನ ಪ್ರಶಸ್ತಿ ಪುರಸ್ಕೃತ, ಭಾರತದ ರಾಷ್ಟ್ರಪತಿಗಳೂ ಆಗಿದ್ದ ಎಲ್ಲಕ್ಕಿಂತ ಹೆಚ್ಚಾಗಿ ಅತ್ಯುತ್ತಮ ಮಕ್ಕಳ ಪ್ರೇಮಿ, ಶಿಕ್ಷಕ ಎಂದೇ ಪ್ರಸಿದ್ಧರಾಗಿರುವ ಡಾ॥ ಎಸ್. ರಾಧಾಕೃಷ್ಣನ್. "ಪ್ರಪಂಚದ ಅರ್ಧದಷ್ಟು ಜನರಿಗೆ ಏನನ್ನೋ ಹೇಳಬೇಕು ಅನ್ನಿಸುತ್ತದೆ. ಆದರೆ, ಅದನ್ನು ಹೇಗೆ ಹೇಳಬೇಕು ಎಂಬುದು ಗೊತ್ತಿಲ್ಲ; ಉಳಿದ ಅರ್ಧದಷ್ಟು ಜನರಿಗೆ ಹೇಳಲು ಏನೂ ಇರುವುದಿಲ್ಲ; ಆದರೆ ಏನನ್ನಾದರೂ ಹೇಳುತ್ತಲೇ ಇರುತ್ತಾರೆ" ಎನ್ನುತ್ತಾರೆ ರಾಬರ್ಟ್ ಫ್ರಾಸ್ಟ್.

"ಸಂವಹನ" ಪದವನ್ನು ಇಂಗ್ಲೀಷಿನಲ್ಲಿ ಕಮ್ಯುನಿಕೇಷನ್ ಎನ್ನಲಾಗಿದೆ. ಕಮ್ಯುನಿಕೇಷನ್ ಪದವು ಲ್ಯಾಟಿನ್ ಭಾಷೆಯ 'ಕಮ್ಯುನಿಕೇರ್' ಪದದಿಂದ ಬಂದಿದೆ. ಕಮ್ಯುನಿಕೇರ್ ಎಂದರೆ to make it common ನೀವೇನು ಹೇಳಬೇಕೆಂದಿರುವಿರೋ, ಅದನ್ನು ಬೇರೆಯವರು ತಿಳಿದುಕೊಳ್ಳಲಿ ಎಂದರ್ಥ. ಒಬ್ಬರಿಂದ ಒಬ್ಬರಿಗೆ, ಒಬ್ಬರಿಂದ ಅನೇಕ ಜನರಿಗೆ, ಅನೇಕರಿಂದ ಒಬ್ಬರಿಗೆ ವಿಷಯವನ್ನು ತಿಳಿಸುವುದು ಎಂದರ್ಥ. ಆದರೆ, ಸಂವಹನ ಕೇವಲ ಅಂಚೆ ಕಚೇರಿ ಕೆಲಸವಲ್ಲ. ಸಂವಹನ ಪ್ರಕ್ರಿಯೆ ಯಾರು ಸಂದೇಶ ನೀಡುವವರು? ಏನು ಸಂದೇಶ ಹೇಳುತ್ತಾರೆ? ಯಾವುದರ ಮೂಲಕ? ಮಾಧ್ಯಮ/ಮಾರ್ಗ ವಿಧಾನ ಯಾವುದು? ಯಾರಿಗೆ ಹೇಳುವುದು? ಪರಿಣಾಮ ಅಥವಾ ಪ್ರತಿಕ್ರಿಯೆ ಏನು?

ಸಂವಹನದ ಲಕ್ಷಣಗಳಲ್ಲಿ ಮುಖ್ಯವಾಗಿ ವಿಷಯವನ್ನು ಸರಿಯಾಗಿ ತಿಳಿಸುವುದು, ಆ ವಿಷಯವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದು, ಅಷ್ಟೇ ಅಲ್ಲ ಆ ವಿಷಯದ ಉದ್ದೇಶವನ್ನು ಈಡೇರಿಸುವುದು ಪ್ರಮುಖವಾಗಿದೆ. ಸರಿಯಾದ ಮಾತನ್ನು ಸರಿಯಾದ ವೇಳೆಯಲ್ಲಿ ಸರಿಯಾದ ರೀತಿಯಲ್ಲಿ ಹೇಳುವುದನ್ನು ರೂಢಿಸಿಕೊಳ್ಳಬೇಕು. ಇದೊಂದು ಕಲೆ ಇಲ್ಲದಿದ್ದರೆ ಸಂವಹನ ವಿಫಲವಾಗುತ್ತದೆ.

ಶಬ್ದ, ಉಪಯೋಗಿಸುವ ಭಾಷೆ, ದೂರ, ಗ್ರಹಿಕೆ, ಕ್ಷೀಣ ಧ್ವನಿ, ನಿರೀಕ್ಷೆ, ಅಸ್ಪಷ್ಟ ಬರಹ, ಹೆದರಿಕೆ, ದೋಷಪೂರಿತ ಉಪಕರಣ, ವಾದ, ಕಳುಹಿಸಿದ ಸುದ್ದಿಗಳು, ಆದೇಶಗಳು ಸ್ಪಷ್ಟವಾಗಿರದಿದ್ದಾಗ ತೊಂದರೆಗಳಿದ್ದಾಗ ಸಂವಹನ ವಿಫಲವಾಗುತ್ತದೆ. ಇವು ಸಂವಹನದ ಸಮಸ್ಯೆಗಳೂ ಹೌದು.

### ಸಂವಹನದ ಸಪ್ತ ಸೂತ್ರಗಳು

- ಪೂರ್ಣ ಮಾಹಿತಿ.
- ಕಡಿಮೆ ಪದಗಳು.
- ಖಚಿತತೆ.
- ಸ್ಪಷ್ಟವಾದ ಅರ್ಥ.
- ಸರಿಯಾಗಿ ತಿಳಿಸುವುದು ಮತ್ತು ಅರ್ಥ ಮಾಡಿಕೊಳ್ಳುವುದು.
- ಇತರರ ಭಾವನೆಗಳ ಬಗ್ಗೆ ಗೌರವ.
- ಸಭ್ಯತೆ.

(ಮುಂದುವರೆಯುವುದು)

ಮೂಲಕ ವ್ಯಕ್ತಿತ್ವ ವಿಕಸನ ಸಾಧ್ಯವಾಗುವಂತೆ ತರಬೇತಿ ನೀಡಲಾಯಿತು.

**ಅನೌಪಚಾರಿಕ ಸಭೆಗಳು :** ಪ್ರತಿ ದಿನ ಸಂಜೆ ಅನೌಪಚಾರಿಕ ಅವಧಿಗಳ ಮೂಲಕ ಸಾಂಸ್ಕೃತಿಕ ಮನರಂಜನಾತ್ಮಕ ಸಮಯವನ್ನು ಶಿಬಿರಾರ್ಥಿಗಳಿಗೆ ವಿಶ್ರಾಂತಿಯ ಅವಧಿಯಾಗಿ ಒದಗಿಸಲಾಗಿತ್ತು.

**ಅಧ್ಯಯನ ಪ್ರವಾಸ :** ಚರಕ ಮಹಿಳಾ ವಿವಿದೋದ್ದೇಶ ಕೈಗಾರಿಕಾ ಸಹಕಾರ ಸಂಘ ನಿ., ಭೀಮನಕೋಣೆ ಇಲ್ಲಿಗೆ ಭೇಟಿ ನೀಡಲಾಯಿತು. ಸುಮಾರು 350ಕ್ಕೂ ಹೆಚ್ಚು ಗ್ರಾಮೀಣ ಯುವಕ ಯುವತಿಯರಿಗೆ ಉದ್ಯೋಗ ಕಲ್ಪಿಸುವ ಮೂಲಕ ಚರಕ ಗ್ರಾಮೀಣ ನಿರುದ್ಯೋಗ ಸಮಸ್ಯೆಗೆ ಪರಿಹಾರ ನೀಡಿದೆ. ಇದರ ಬಗ್ಗೆ ವಿವರವಾದ ಅಧ್ಯಯನ ನಡೆಸಲಾಯಿತು.

ಸೌಹಾರ್ದ ಸಹಕಾರಿಯ ನೂತನ ಪರಿಕಲ್ಪನೆಯಾದ ಸುವಿಧಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ.,ದ ಸೂಪರ್ ಮಾರ್ಕೆಟ್‌ಗೆ ಭೇಟಿ ನೀಡಲಾಯಿತು. ಅಲ್ಲಿನ ಕಾರ್ಯವಿಧಾನವನ್ನು ವೀಕ್ಷಿಸಿದ ನಂತರ ಸುವಿಧಾ ಸ್ಥಾಪನೆಯ ಉದ್ದೇಶ ಹಾಗೂ ಸ್ಥಾಪಿಸಿದ ರೀತಿಯನ್ನು ಅದರ ಅಧ್ಯಕ್ಷರಾದ ಶ್ರೀಯುತ ಬಿ.ವಿ.ರವೀಂದ್ರನಾಥ್‌ರವರು ತಿಳಿಸಿದರು.

ಸಮಾರೋಪ ಕಾರ್ಯಕ್ರಮವನ್ನು ದಿನಾಂಕ.18.06.2012ರಂದು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಶ್ರೀ ಶಾಂತರಾಮ ಹೆಗಡೆ, ಅಧ್ಯಕ್ಷರು ಡಿ.ಸಿ.ಸಿ. ಬ್ಯಾಂಕ್ ಹಾಗೂ ಟಿ.ಎಸ್.ಎಸ್. ಉತ್ತರ ಕನ್ನಡ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಅಧ್ಯಕ್ಷರಾದ ಶ್ರೀ ಸತೀಶಚಂದ್ರ, ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ, ಮಾಜಿ ಉಪಾಧ್ಯಕ್ಷರಾದ ಶ್ರೀ ಯು.ಹೆಚ್.ರಾಮಪ್ಪ, ನೀನಾಸಂನ ರಂಗ ಮಂದಿರ ನಿರ್ದೇಶಕರಾದ ಕೆ.ವಿ.ಅಕ್ಷರ, ಸುವಿಧಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ.,ದ ಅಧ್ಯಕ್ಷರಾದ ಚಾರ್ಟರ್ಡ್ ಅಕೌಂಟೆಂಟ್ ಶ್ರೀ ಬಿ.ವಿ.ರವೀಂದ್ರನಾಥ್, ಸಿದ್ಧಿವಿನಾಯಕ ಸೌಹಾರ್ದ ಸಹಕಾರಿ ನಿ., ಅಧ್ಯಕ್ಷರಾದ ಶ್ರೀ ಸಂಜೀವ.ಎಸ್.ಮಹಾಜನ ಹಾಗೂ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶಿಬಿರಾರ್ಥಿಗಳ ಅನಿಸಿಕೆಗಳು, ಸಲಹೆಗಳ ಸಂಗ್ರಹಣೆ, ಪ್ರಮಾಣ ಪತ್ರ ವಿತರಣೆಗಳನ್ನು ನಡೆಸಲಾಯಿತು. ಸಮಾರೋಪ ಸಮಾರಂಭವನ್ನು ಶಿಬಿರಾರ್ಥಿಗಳೇ ನಡೆಸಿಕೊಟ್ಟಿದ್ದು ವಿಶೇಷವಾಗಿತ್ತು.

**– ದಿವ್ಯ ಟಿ. – ಶಿಬಿರಾರ್ಥಿ, ಕರಾಸೌಸಂಸನಿ., ಬೆಂಗಳೂರು**



ಸುಗಮ ಸಂಗೀತ



ಕೋಲಾಟ



ಅಘೋರೇಶ್ವರ ದೇವಾಲಯದ ಮುಂಭಾಗದಲ್ಲಿ ಶಿಬಿರಾರ್ಥಿಗಳು



ಹೊಂಗಿರಣ ಶಾಲಾ ಮಕ್ಕಳಿಂದ ಯಕ್ಷಗಾನ

# ಅರ್ಥಪೂರ್ಣ ತರಬೇತಿ : ನೀನಾಸಂನಲ್ಲಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರ






ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಶಿವಮೊಗ್ಗ ಜಿಲ್ಲಾ ಸಹಕಾರ ಮಹಾಮಂಡಳ ನಿ., ಇವರುಗಳ ಸಹಯೋಗದೊಂದಿಗೆ ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ದಿನಾಂಕ:09.06.2012 ರಿಂದ 18.06.2012ರವರೆಗೆ ಸುಂದರ ಪ್ರಕೃತಿಯ ತಾಣವಾದ ಮಲೆನಾಡಿನ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹೆಗ್ಗೋಡು ಗ್ರಾಮದ ನೀಲಕಂಠೇಶ್ವರ ನಾಟ್ಯ ಸಂಘದಲ್ಲಿ 7ನೇ ತಂಡದ 10 ದಿನಗಳ ವಿಶೇಷ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಸಂಸದರಾದ ಶ್ರೀ ಬಿ.ವೈ.ರಾಘವೇಂದ್ರರವರು ಉದ್ಘಾಟನೆ ಮಾಡುವ ಮೂಲಕ ತರಬೇತಿ ಶಿಬಿರಕ್ಕೆ ಚಾಲನೆ ನೀಡಲಾಯಿತು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ದ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರವಿಕುಮಾರ್ ಸ್ವಾಗತಿಸಿದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ.ಜಿ.ಪಾಟೀಲ್ ಪ್ರಾಸ್ತಾವಿಕ ಭಾಷಣ ಮಾಡಿದರು. ಈ ಸಂದರ್ಭದಲ್ಲಿ ಮಯೂರ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ವೆಂಕಟೇಶ್ ಹಾಗೂ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷರಾದ ಶ್ರೀ ಸುರೇಶ್, ನೀನಾಸಂ ಅಧ್ಯಕ್ಷರಾದ ಶ್ರೀ ಹೆಚ್.ವಿ.ಚಂದ್ರಶೇಖರ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮಾಜಿ ಉಪಾಧ್ಯಕ್ಷರಾದ ಶ್ರೀ ಯು.ಹೆಚ್. ರಾಮಪ್ಪ, ಸುವಿಧಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಅಧ್ಯಕ್ಷರಾದ ಚಾರ್ಟರ್ಡ್ ಅಕೌಂಟೆಂಟ್ ಶ್ರೀ ಬಿ.ವಿ.ರವೀಂದ್ರನಾಥ್, ನೀನಾಸಂ ರಂಗ ಮಂದಿರ ನಿರ್ದೇಶಕರಾದ ಅಕ್ಷರ ಕೆ.ವಿ, ಜೊತೆಗೆ ಸಂಯುಕ್ತ ಸಹಕಾರಿಯ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಸೌಹಾರ್ದ ಸಹಕಾರಿಗಳ ವಿವಿಧ ವೃತ್ತಿ ವರ್ಗಗಳಿಗೆ ಸೇರಿದ ಒಟ್ಟು 49 ಜನ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಶಿಬಿರಾರ್ಥಿಗಳನ್ನು ಪರಿಚಯವನ್ನು ವಿಭಿನ್ನ ರೀತಿಯಲ್ಲಿ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ನಡೆಸಿಕೊಟ್ಟರು. ಸಂಪೂರ್ಣ ವ್ಯಕ್ತಿತ್ವ ವಿಕಸನವಾಗುವಂತೆ ಹಾಗೂ ವೃತ್ತಿ ಕೌಶಲ್ಯ ಹಾಗೂ ಜ್ಞಾನ ಹೆಚ್ಚುವಂತೆ ಅತ್ಯುತ್ತಮ ಸಂಪನ್ಮೂಲ ವ್ಯಕ್ತಿಗಳಿಂದ ಉನ್ನತ ಮಟ್ಟದ ಉಪನ್ಯಾಸಗಳನ್ನು ಹಾಗೂ ಕ್ರಿಯಾಶೀಲ ಚಟುವಟಿಕೆಗಳನ್ನು ಈ ಶಿಬಿರ ಒಳಗೊಂಡಿತ್ತು. ಪ್ರತಿ ದಿನ ಬೆಳಿಗ್ಗೆ 6.30ರ ಯೋಗ ತರಬೇತಿಯೊಂದಿಗೆ ಆರಂಭವಾಗುತ್ತಿದ್ದ ದಿನಚರಿ ಉಪನ್ಯಾಸಗಳು, ಚರ್ಚೆ, ಮನರಂಜನಾ ಕಾರ್ಯಕ್ರಮಗಳನ್ನೊಳಗೊಂಡು ರಾತ್ರಿ 9.30ರವರೆಗೂ ವಿಸ್ತರಿಸಿತ್ತು. ದಿನವೊಂದರಲ್ಲಿನ ಸಮಯವನ್ನು ಶಿಸ್ತುಬದ್ಧವಾಗಿ ಸಂಪೂರ್ಣವಾಗಿ ಉಪಯೋಗಿಸುವ ಬಗೆಯನ್ನು ಶಿಬಿರ ಕಲಿಸಿಕೊಟ್ಟಿತು.

ಶಿಬಿರದಲ್ಲಿ ಮೊದಲ ಮೂರು ದಿನಗಳನ್ನು ಸಹಕಾರ ಕ್ಷೇತ್ರದ ಹಾಗೂ ಸೌಹಾರ್ದ ಸಹಕಾರ ರಂಗದ ಬೆಳವಣಿಗೆಯನ್ನು ತಿಳಿಯುವಂತೆ ವಿಷಯ ಜೋಡಿಸಲಾಗಿತ್ತು. ಇದರಲ್ಲಿ ಸಹಕಾರದ ಅರ್ಥ, ವ್ಯಾಖ್ಯಾನ, ಮಹತ್ವ, ಆಧುನಿಕ ಸಹಕಾರ ಚಳುವಳಿಯ ಉಗಮ, ತತ್ವ, ಬೆಳವಣಿಗೆ, ಸಹಕಾರದ ಮೌಲ್ಯಗಳು, ಭಾರತ ದೇಶದಲ್ಲಿ ಸಹಕಾರ ಚಳುವಳಿ, ಭಾರತದಲ್ಲಿ ಸಹಕಾರ ಕಾಯ್ದೆಯ ಬೆಳವಣಿಗೆ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ-1997, ಸಂಯುಕ್ತ ಸಹಕಾರಿಯ ರಚನೆ, ಕಾರ್ಯ ವಿಧಾನ, ಶಾಸನಾತ್ಮಕ ಕಾರ್ಯಗಳು, ಸಂಯುಕ್ತ ಸಹಕಾರಿಯ ಸುತ್ತೋಲೆಗಳು, ಸಂಯುಕ್ತ ಸಹಕಾರಿ ಹಾಗೂ ಸೌಹಾರ್ದ ಸಹಕಾರಿಗಳ ಸಂಬಂಧ, ಸೌಹಾರ್ದ ಸಹಕಾರಿಗಳ ಆಡಳಿತ ವ್ಯವಸ್ಥೆ, ಸೌಹಾರ್ದ ಸಹಕಾರಿಯ ಆಶಯ, 1959ರ ಸಹಕಾರ ಸಂಘಗಳ ಕಾಯಿದೆ





ಕಲಿಕೆಯ ನಿರಂತರತೆಯಲ್ಲಿ ಒಂದು ಹೊಸ ಅನುಭವ. – ಕುಮಾರಿ ದಿವ್ಯ ಟಿ

ಈ ತರಬೇತಿಯಲ್ಲಿ ಬೀಜ ಬಿತ್ತುವ ಕಾರ್ಯವಾಗಿದೆ. ಅದನ್ನು ಬೆಳೆಸುವುದು ನಮ್ಮ ಕಾರ್ಯವಷ್ಟೆ. – ಶ್ರೀ ಬಸವರಾಜ್ ಎಸ್ ಹೊಂಗಲ್

ತರಬೇತಿಯು ಉತ್ತಮವಾಗಿದ್ದು, ನನಗೆ ಹೊಸ ಅನುಭವ ನೀಡಿದೆ. – ಶ್ರೀ ಮಂಜುನಾಥ.ಎಸ್

ಇಂತಹ ತರಬೇತಿಗಳು ಸಹಕಾರಿ ಸಂಸ್ಥೆಗೆ ತುಂಬಾ ಅಗತ್ಯವಾದದ್ದು. – ಕುಮಾರಿ ಸುಜಾತ

ತರಬೇತಿಯು ಅತ್ಯುತ್ತಮವಾಗಿತ್ತು. – ಶ್ರೀಮತಿ ಸಹನ ಆರ್ ಶೆಟ್ಟರ್

ತರಬೇತಿಯು ಅರ್ಥಪೂರ್ಣವಾಗಿತ್ತು. – ಶ್ರೀ ದಯಾನಂದ ಕೆ.ಬಿ.

ಅಧ್ಯಯನ ಸಾಹಿತ್ಯ ಉತ್ತಮವಾಗಿದ್ದು, ಕಲಾ ಸಂಸ್ಕೃತಿಯಲ್ಲಿ ಪಡೆದ ತರಬೇತಿ ಮರೆಯದಂತಹದ್ದು. – ಶ್ರೀಮತಿ ಸುನೀತಾ ಪರಮೇಶ್ವರ ಕುಂಬಾರ.

ತರಬೇತಿಯು ತುಂಬಾ ಚೆನ್ನಾಗಿತ್ತು. – ಕು.ಅಭಿಲಾಷ ಆರ್.

ತರಬೇತಿಯು ಉತ್ತಮ ಪರಿಸರದಲ್ಲಿತ್ತು. – ಶ್ರೀ ವಿವೇಕಾನಂದ ಸ್ವಾಮಿ ಹೆಚ್.ಎಸ್

ಪ್ರಾಯೋಗಿಕ ಅವಧಿಗಳಿಗೆ ಅವಕಾಶ ಕಲ್ಪಿಸಬೇಕಿತ್ತು. ಒಟ್ಟು ತರಬೇತಿ ಅತ್ಯುತ್ತಮವಾಗಿತ್ತು. – ಶ್ರೀ ಗುರುಪ್ರಸಾದ್

ಅಧ್ಯಯನ ಸಾಹಿತ್ಯದ ವಿಷಯ ಜೋಡಣೆ ಅತ್ಯುತ್ತಮವಾಗಿತ್ತು. – ಕು. ಸುನೀತ.ಬಿ.ಎಸ್.

ಉತ್ತಮ ಪರಿಸರದಲ್ಲಿ ತರಬೇತಿ ಜೋಡಿಸಿರುವುದು ಶ್ಲಾಘನೀಯ. – ಶ್ರೀ ಮಂಜುನಾಥ ಎಂ.ಜಿ.

ನನ್ನಲ್ಲಿ ಅನೇಕ ಬದಲಾವಣೆ ತಂದಿದೆ ತರಬೇತಿ. – ಶ್ರೀ ನಾಗೇಂದ್ರ ಈರಣ್ಣ ಉಮ್ಮಗಿ.

ಇಂತಹ ಕಾರ್ಯಾಗಾರಗಳು ಸಹಕಾರಿ ಸಂಸ್ಥೆಗಳಿಗೆ ಅತಿ ಅಗತ್ಯ – ಶ್ರೀ ಪ್ರಸಾದ ಹೆಗಡೆ.

ಶಿಸ್ತು, ಸಮಯ ಪಾಲನೆ ಹಾಗೂ ಕಾರ್ಯನಿರ್ವಹಣೆ ವ್ಯವಸ್ಥಿತವಾಗಿತ್ತು. – ಶ್ರೀ ಅನಿಲ್‌ಕುಮಾರ್ ಕೊಡಂಬಲ್.

ಅತ್ಯುತ್ತಮ ತರಬೇತಿ ಕಾರ್ಯಕ್ರಮ. – ಶ್ರೀಮತಿ ವಿ.ಸಿ.ರತ್ನಮ್ಮ

ತರಬೇತಿಯು ಉತ್ತಮ ಪರಿಸರದಲ್ಲಿತ್ತು. – ಶ್ರೀ ರಾಮು.ಬಿ.ಬಂಡಿವಾಡ.

ಗುಣಾತ್ಮಕವಾಗಿತ್ತು. – ಶ್ರೀ ಹರೀಶ್ ಕೆ.ಎಸ್

ಸಹಕಾರದ ಬಗ್ಗೆ ಸಾಕಷ್ಟು ವಿಷಯಗಳನ್ನು ತಿಳಿದುಕೊಂಡೆನು. – ಶ್ರೀ ವಿಜಯ ಮಹಾದೇವ

ವೈಯಕ್ತಿಕ ಹಾಗೂ ಸಹಕಾರಿ ಅಭಿವೃದ್ಧಿಗೆ ತುಂಬಾ ಸಹಕಾರಿಯಾಗಿತ್ತು. –ಶ್ರೀ ಶಶಿಕಾಂತ ಕೃಷ್ಣಾಕಾಂತ.

ವ್ಯಕ್ತಿತ್ವದ ಬಗ್ಗೆ ಸಾಕಷ್ಟು ಮಾಹಿತಿಯನ್ನು ತಿಳಿದುಕೊಂಡೆನು. – ಶ್ರೀ ಅನಿಲ್ ಕುಮಾರ್ ಎಸ್.ವಿ.

ಕಾರ್ಯಾಗಾರದ ವಿಷಯಗಳು ಅತ್ಯುತ್ತಮವಾಗಿದ್ದವು. – ಶ್ರೀ ಹೇಮಂತ ಬಿ.ವಿ.

ತರಬೇತಿಯು ಅತ್ಯುತ್ತಮವಾಗಿತ್ತು. – ಶ್ರೀ ಗಿರೀಶ್ ಎಸ್.ಜಿ. ರಾಥೋಡ್.

ಅಧ್ಯಯನ ಸಾಹಿತ್ಯ ಉತ್ತಮವಾಗಿತ್ತು. – ಶ್ರೀ ಎಸ್.ಶ್ರೀಕಂಠ.

ಹಾಗೂ 1997ರ ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆಗೆ ಇರುವ ವ್ಯತ್ಯಾಸಗಳು ಇತ್ಯಾದಿ ವಿಷಯಗಳ ಕುರಿತಂತೆ ಸಹಕಾರ ಕ್ಷೇತ್ರದ ಅನುಭವಿಗಳಿಂದ, ತಜ್ಞರಿಂದ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ನಂತರದ ದಿನಗಳಲ್ಲಿ ಸೌಹಾರ್ದ ಕಾಯ್ದೆಯ ಕುರಿತಂತೆ , ಶಾಸನಬದ್ಧವಾದ ವಿಷಯಗಳ ಕುರಿತಂತೆ ಉಪನ್ಯಾಸಗಳು ನಡೆದವು. ಇದರಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಶಾಸನಬದ್ಧ ಜವಾಬ್ದಾರಿಗಳು/ ಕರ್ತವ್ಯಗಳು, ಅಪರಾಧಗಳು ಮತ್ತು ದಂಡಗಳು, ಗಮನಿಸಬೇಕಾದ ಪ್ರಮುಖ ದಿನಾಂಕಗಳು, ಸಹಕಾರಿ ಸಂಸ್ಥೆಗಳ ಸಭೆಗಳು, ನೋಟೀಸ್ ಕಳುಹಿಸುವ ವಿಧಾನ, ಆಡಳಿತ ಮಂಡಳಿ ಸಭೆ ಪರಿಶೀಲಿಸಬೇಕಾದ ವಿಷಯಗಳು, ಸಹಕಾರಿ ಸಂಸ್ಥೆಗಳ ಉಪವಿಧಿಗಳು ಮತ್ತು ತಿದ್ದುಪಡಿಗಳು ಇತ್ಯಾದಿಗಳ ಬಗ್ಗೆ ಮಾಹಿತಿ ನೀಡಲಾಯಿತು.

ಶಿಬಿರದ ಉಪನ್ಯಾಸಗಳಲ್ಲಿ ದೈನಂದಿನ ಕಾರ್ಯಚಟುವಟಿಕೆಗಳಿಗೆ ಅನುಕೂಲವಾಗುವಂತ ಹಣಕಾಸಿನ ವಿಷಯಗಳನ್ನು, ಪ್ರಸಕ್ತ ವಿದ್ಯಮಾನಗಳ ಕುರಿತ ಉಪನ್ಯಾಸಗಳನ್ನು ಆಯೋಜಿಸಲಾಗಿತ್ತು. ಇದರಲ್ಲಿ ಹಣಕಾಸಿನ ನಿರ್ವಹಣೆ, ಲಾಭದಾಯಕ ಹೂಡಿಕೆ ಹಾಗೂ ಬಡ್ಡಿಯೇತರ ಆದಾಯಗಳು, ಗ್ರಾಹಕರ ಸೇವೆಗಳ ನಿರ್ವಹಣೆ, ಪ್ರಸ್ತುತ ಬ್ಯಾಂಕಿಂಗ್ ಕ್ಷೇತ್ರದ ವಿದ್ಯಮಾನಗಳು ಹಾಗೂ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಅವಕಾಶಗಳು, ಲೆಕ್ಕಪತ್ರಗಳ ನಿರ್ವಹಣೆ ಮತ್ತು ಲೆಕ್ಕಪರಿಶೋಧನೆಗೆ ಸಿದ್ಧತೆ,



ಅಧ್ಯಯನ ಸಾಹಿತ್ಯವು ಅತ್ಯುತ್ತಮವಾಗಿತ್ತು. ನನ್ನಲ್ಲಿ ಆತ್ಮಸ್ಥೈರ್ಯ ಮೂಡಿಸಿದೆ. – ಕುಮಾರಿ ಕೆ.ಎಂ. ರೇಣುಕಾದೇವಿ.

ನಾಯಕತ್ವದ ಗುಣಗಳನ್ನು ಬೆಳಸಿಕೊಳ್ಳಲು ಅಡಿಪಾಯದಂತೆ ಕಾರ್ಯಾಗಾರವಿತ್ತು. – ಶ್ರೀ ನಾಗರಾಜ ವೀರಭದ್ರ ಹಂಚಿನಮನಿ.

ಆಹಾರದ ವ್ಯವಸ್ಥೆ ಚೆನ್ನಾಗಿತ್ತು. ಅಧ್ಯಯನ ಸಾಹಿತ್ಯ ಅತ್ಯುತ್ತಮವಾಗಿತ್ತು. – ಶ್ರೀ ವಿನೋದ್ ಮಡಿವಾಳ್.

ಕಾರ್ಯಾಗಾರದ ವ್ಯವಸ್ಥೆ ಚೆನ್ನಾಗಿತ್ತು. – ಶ್ರೀಮತಿ ಹಮಿದಾ ಬಾನು.

ತರಬೇತಿ ಆತ್ಮವಿಶ್ವಾಸ ಮೂಡಿಸಿದೆ. – ಶ್ರೀ ಉಮೇಶ್ ಎಸ್. ಪಾಟೀಲ್

ಅಧ್ಯಯನ ಸಾಹಿತ್ಯ ತುಂಬಾ ಚನ್ನಾಗಿದೆ. – ಕುಮಾರಿ ಅನಿತಾ.ಆರ್. ತಳೇಕರ.

ಸಾಂಸ್ಕೃತಿಕ ಕಾರ್ಯಕ್ರಮ ಅತ್ಯುತ್ತಮವಾಗಿತ್ತು. – ಕುಮಾರಿ ಮಮತ ಕೆ.ಎಂ.

ತರಬೇತಿ ಹೆಚ್ಚು ಆತ್ಮವಿಶ್ವಾಸ ಮೂಡಿಸಿದೆ. – ಕುಮಾರಿ ಮಾಲಿನಿ.

ಕಾರ್ಯಾಗಾರದ ವಿಷಯಗಳು ಅತ್ಯುತ್ತಮವಾಗಿದ್ದವು. – ಕುಮಾರಿ ಪೂರ್ಣಿಮ ಕೆ.ಎಸ್.

ಮೌಲ್ಯಯುತವಾದ, ಆದರ್ಶದಾಯಕ ವಿಶಿಷ್ಟವಾದ ಮಾದರಿಯಾದ ತರಬೇತಿಯಾಗಿದೆ. – ಶ್ರೀ ಶಂಕರ ಪರಗೇಡಾ ಜಗದಾಳೆ.

ತರಬೇತಿಯು ಅತ್ಯುತ್ತಮವಾಗಿತ್ತು. – ಶ್ರೀಮತಿ ರೇಖಾ ಆನಂದ.

ಒಳ್ಳೆಯ ಪ್ರಕೃತಿಯ ಮಡಿಲಲ್ಲಿ ತರಬೇತಿಯು ಜರುಗಿರುವುದು ಸಂತೋಷದಾಯಕ. – ಶ್ರೀ ಪ್ರವೀಣ ಡಿ.ಗೌಡ.

ನಮ್ಮೆಲ್ಲರನ್ನು ಪುನಃ ವಿದ್ಯಾರ್ಥಿ ಜೀವನಕ್ಕೆ ಕರೆದೊಯ್ದು ಪುನರ್ಮನನ ಮಾಡಿದಂತಾಗಿದೆ. – ಶ್ರೀಮತಿ ಗೀತಾ ಎಸ್ ಮಧುಕುಮಾರ್.

ಈ ಶಿಬಿರದಿಂದಾಗಿ ನಾನು ಉತ್ತಮ ಸಹಕಾರಿ ಕಾರ್ಯಕರ್ತನಾಗಲು ಸಹಕಾರಿಯಾಯಿತು. – ಶ್ರೀ ಚನ್ನಬಸಪ್ಪ ಕಡ್ಡಿಪುಡಿ.

ನಮ್ಮ ಮನ ಪರಿವರ್ತನೆಯಾಗಲು ಇಂತಹ ತರಬೇತಿಗಳು ಅಗತ್ಯ. – ಶ್ರೀ ಮುನಿರಾಜು.

ಅತ್ಯುತ್ತಮವಾದ ಪರಿಸರದಲ್ಲಿ ತರಬೇತಿ ಇದ್ದದ್ದು ನಮ್ಮ ಭಾಗ್ಯ. – ಶ್ರೀ ವೈ.ಎನ್ ವೇಣು ಗೋಪಾಲ್ ರೆಡ್ಡಿ.

ಪ್ರಾಯೋಗಿಕ ತರಗತಿಗಳಿದಿದ್ದರೆ ತುಂಬಾ ಚೆನ್ನಾಗಿರುತ್ತಿತ್ತು. – ಶ್ರೀ ಬಸವರಾಜ್ ಅರಳೀಕಟ್ಟೆ

ಕಾರ್ಯಾಗಾರದ ವ್ಯವಸ್ಥೆ ಅತ್ಯುತ್ತಮವಾಗಿತ್ತು. – ಶ್ರೀ ದೇವಾನಂದ್ ರಾವ್

ಅವಧಿಗಳು ಉತ್ತಮವಾಗಿದ್ದವು. – ಶ್ರೀ ನಾಗರಾಜ್

ಹೆಚ್ಚು ಆತ್ಮ ವಿಶ್ವಾಸ ಮೂಡಿಸಿದೆ. – ಶ್ರೀ ಚಂದ್ರಶೇಖರ್.ಎಂ.

ಅಮೂಲ್ಯವಾದ ತರಬೇತಿಯಾಗಿತ್ತು. – ಶ್ರೀ ಬಸವರಾಜ್ ವೈ ಪಾಟೀಲ್.

ಇಂತಹ ತರಬೇತಿಗಳು ನಮ್ಮ ಯುವ ಪೀಳಿಗೆಗೆ ಅತ್ಯಗತ್ಯ. – ಶ್ರೀ ರಾವ್ ಸಾಬ ಸಿದ್ದಪ್ಪಾ ಬಮ್ಮಣ್ಣವರ.

ಸಾಮಾನ್ಯದಿಂದ ಅಸಮಾನ್ಯತೆ ಕಡೆಗೆ ದಾರಿಯನ್ನು ಈ ತರಬೇತಿಯಿಂದ ಪಡೆದನು. – ಶ್ರೀ ಜೈಕಾರ್.

ಅತ್ಯುತ್ತಮವಾದ ತರಬೇತಿ ಸಾಂಸ್ಕೃತಿಕ ಕಾರ್ಯಾಗಾರವಾಗಿತ್ತು. – ಶ್ರೀಮತಿ ಭಾರತಿ ವಿ ಶೆಲ್ಲೇದ.

ಆಧುನಿಕ ತಂತ್ರಾಂಶ, ಸೌಹಾರ್ದ ಸಹಕಾರಿಗಳ ಆಧುನೀಕರಣ, ತೆರಿಗೆಗಳು ಹಾಗೂ ಅವುಗಳ ವಿಧಗಳು, ಮಾಹಿತಿ ಹಕ್ಕು ಕಾಯ್ದೆ, ಗುಣಾತ್ಮಕ ಸಾಲ ನೀಡುವ ವಿಧಾನಗಳು, ಸಾಲ ದಾಖಲಾತಿ ನಿರ್ವಹಣೆ, ಸಾಲ ಕೊಡುವಾಗ ಗಮನಿಸಬೇಕಾದ ಅಂಶಗಳು, ಸಾಲದ ವಿಧಗಳು, ಸಾಲ ಕೊಡುವಾಗ ಸರಿಯಾಗಿ ತೆಗೆದುಕೊಳ್ಳಬೇಕಾದ ದಾಖಲಾತಿಗಳು, ಅವಶ್ಯಕತೆಗಳು, ಸಾಲ ವಸೂಲಾತಿ, ಸಂಯುಕ್ತ ಸಹಕಾರಿಯ ಮಾರ್ಗಸೂಚಿಗಳು, ಸುತ್ತೋಲೆಗಳ ಬಗ್ಗೆ ತಿಳಿಸಿಕೊಡಲಾಯಿತು. ಆರ್‌ಬಿಐನಿಂದ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಖೋಟಾ ಹಾಗೂ ಹರಿದ ನೋಟುಗಳ ನಿರ್ವಹಣೆ ಬಗ್ಗೆ, ಖೋಟಾನೋಟುಗಳನ್ನು ಪತ್ತೆ ಹಚ್ಚುವ ವಿಧಾನದ ಬಗ್ಗೆ ತರಬೇತಿ ನೀಡಲಾಯಿತು.

ವಿಷಯ ಕೇಂದ್ರಿತ ಉಪನ್ಯಾಸಗಳಲ್ಲದೆ ಪ್ರತಿದಿನ ವ್ಯಕ್ತಿತ್ವ ವಿಕಸನಕ್ಕೆ ಸಹಾಯಕವಾಗುವಂತೆ ತಜ್ಞರಿಂದ ಉಪನ್ಯಾಸಗಳನ್ನೇರ್ಪಡಿಸಲಾಗಿತ್ತು. ಇದರಲ್ಲಿ, ಸೌಹಾರ್ದ ಸಹಕಾರಿಯ ಸಿಬ್ಬಂದಿಗಳಲ್ಲ, ಸಹಕಾರಿಯ ಕಾರ್ಯ ಕರ್ತರು ಎಂಬ ವಿಷಯದ ಕುರಿತ ಉಪನ್ಯಾಸ, ಸಾಮಾನ್ಯತೆಯಿಂದ ಅಸಾಮಾನ್ಯ ಸಾಧನೆಯತ್ತ, ಟೀಂ ವರ್ಕ್ ಹಾಗೂ ನಾಯಕತ್ವ ವಿಷಯದ ಬಗ್ಗೆ ಉಪನ್ಯಾಸ, ಭಾಷಣ ಕಲೆ ರೂಢಿಸಿಕೊಳ್ಳುವ ಕಲೆ ಹೇಗೆ, ಸಮಾರಂಭಗಳ ನಿರ್ವಹಣೆಯ ಬಗ್ಗೆ ಉಪನ್ಯಾಸ, ಸಮಯಪಾಲನೆ ಮತ್ತು ಒತ್ತಡ ನಿರ್ವಹಣೆ, ಉನ್ನತಿಗಾಗಿ ಪರಿಣಿತಿ ಮುಂತಾದ ವಿಷಯಗಳ